# 49

# “ನನ್ನ ಅಪನಂಬಿಕೆಯಲ್ಲಿ ಸಹಾಯಿಸು”

## ಮತ್ತಾಯ 17:14-21; ಮಾರ್ಕ 9:14-29; ಲೂಕ 9:37-43, ಒಂದು ನಿಕಟ ನೋಟ

ಬೈಬಲ್ಲಿನಲ್ಲಿಯ ದೇವರೊಂದಿಗೆ ತಮ್ಮ ನಡೆಯುವಿಕೆಯನ್ನು ಸೂಚಿಸುವ ಅನೇಕರೊಂದಿಗೆ ನಾನು ಗುರುತಿಸಬಲ್ಲೆನು. ಅಧೈರ್ಯಶಾಲಿಯಾದಂತಹ ನಾನು ಎಲಿಯನೊಂದಿಗೆ ಗರುತಿಸಿಕೊಳ್ಳಬಲ್ಲೆನು (1 ಅರಸು 19:10). ತನ್ನ ಕಾರ್ಯಗಳು ಹೆಚ್ಚಾಗಿ ಫಲವಿಲ್ಲದವುಗಳು ಎಂದೆನಿಸಿಕೊಂಡ ಯೆರಮೀಯನೋಡನೆ ನಾನು ಅಳುವವನಾಗಿದ್ದೇನೆ (ಯೆರಮೀಯ 9:1; 13:17). ಮಾತನಾಡುವ ಮೊದಲು ಯೋಚಿಸದೆ ಇರುವಂಥ ಪೇತ್ರನೊಡನೆ ಸಂಬಂಧವನ್ನು ಹೊಂದಿದ್ದೇನೆ (ಲೂಕ 9:33). “ನಾನು ನಂಬಿದ್ದೇನೆ; ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು” ಎಂದು ಯೇಸುವಿನ ಹೇಳಿದ ಆ ತಂದೆಯೊಡನೆ ನಾನು ನನ್ನನ್ನು ಗುರುತಿಸಿಕೊಳ್ಳ ಬಯಸುವ ಪಟ್ಟಿಯ ತುದಿಯ ಹತ್ತಿರದಲ್ಲಿರುವವರೊಡನೆ ನಾನಿದ್ದೇನೆ (ಮಾರ್ಕ 9:24). ಈ ಮನುಷ್ಯನು ಕರ್ತನಿಗೆ ತನ್ನ ಮಗನನ್ನು ಸ್ವಸ್ಥಮಾಡು ಎಂದು ಕೇಳಿದಾಗ ಕ್ರಿಸ್ತನು ಆತನಿಗೆ ಪ್ರತ್ಯುತ್ತರವಾಗಿ “ನಿನ್ನ ಕೈಲಿ ಆಗುವ ಹಾಗಿದ್ದರೆ ಅನ್ನುತ್ತೀಯೋ” (ಮಾರ್ಕ 9:23) ಹೇಳಿದನು. ಅದು ಆ ಮನುಷ್ಯನು “ನಾನು ನಂಬಿದ್ದೇನೆ; ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು” ಎಂದು ಕೂಗಿ ಹೇಳಿದನು.

ಕ್ರೈಸ್ತತ್ವದಲ್ಲಿ ನಂಬಿಕೆಗಿಂತ ಯಾವ ವಿಷಯವೂ ಕೇಂದ್ರವಾದದ್ದಲ್ಲ ಮತ್ತು ನಂಬಿಕೆಯನ್ನು ಬಲಪಡಿಸುವಿಕೆಗಿಂತ ಹೆಚ್ಚುಮಹತ್ವವಾದದಕ್ಕೆ ಯಾವ ಅವಶ್ಯಕತೆಯೂ ಇಲ್ಲ. ಪೌಲನು ಹೀಗೆ ಬರೆಯುತ್ತಾನೆ,

> ಸುವಾರ್ತೆಯ ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ ಸುವಾರ್ತೆಯ ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆಮೇಲೆ ಗ್ರೀಕರಿಗೆ ಅಂತೂ ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದಾಗಿದೆ. ಹೇಗೆಂದರೆ ದೇವರಿಂದ ನೀತಿಯು ಅದರಲ್ಲಿ ತೋರಿಬರುತ್ತದೆ. *ನೀತಿವಂತನು ನಂಬಿಕೆಯಿಂದಲೇ* ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂತದ್ದಾಗಿದೆ (ರೋಮಾಪುರ 1:16, 17; ಒತ್ತಿ ಹೇಳಿದ್ದು ನನ್ನದು).

NIVಯಲ್ಲಿ “*ಮೊದಲಿಂದ ಕೊನೆಯವರೆಗಿನ* ನಂಬಿಕೆಯ ಮೂಲಕ” ಎಂದಿದೆ. (ಒತ್ತಿ ಹೇಳಿದ್ದು ನನ್ನದು.) The New Century Version ಭಾಷಾಂತರದಲ್ಲಿ ದೇವರ ನೀತಿವಂತಿಕೆಯು “ನಂಬಿಕೆಯಿಂದಲೇ ಪ್ರಾರಂಭವಾಗಿ ಮತ್ತು ನಂಬಿಕೆಯ ಜೊತೆಯಲ್ಲಿಯೇ ಕೊನೆಯಾಗುತ್ತದೆ” ಎಂದಿದೆ.

“ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ” (ಇಬ್ರಿಯ 11:6ಎ). “ನಂಬಿಕೆಯ ಮೂಲಕ” ನಾವು “ರಕ್ಷಣೆ” ಹೊಂದುವವರಾಗಿದ್ದೇವೆ (ಎಫೆಸ 2:8ಎ). ನಾವು ಕ್ರಿಸ್ತೀಯ ಮಾರ್ಗದಲ್ಲಿ “ನೋಡುವವರಾಗಿ ನಡೆಯದೆ ನಂಬುವವರಾಗಿ” ನಡೆಯಬೇಕು (2 ಕೊರಿಂಥ 5:7). ನಂಬಿಕೆಯು ಗುರಾಣಿಯಂತಿದ್ದು ಸೈತಾನನಿಂದ ನಮ್ಮನ್ನು ರಕ್ಷಿಸುವುದಾಗಿದೆ (ಎಫೆಸ 6:16). ನಂಬಿಕೆಯು “ಲೋಕವನ್ನು ಜಯಿಸುವಂಥದ್ದಾಗಿದೆ” (1 ಯೋಹಾನ 5:4ಬಿ).

ನಂಬಿಕೆಯ ಒಂದು ಯೋಗ್ಯವಾದ "ಫಲಿತಾಂಶ"ವು ನಮ್ಮ ಆತ್ಮಗಳ "ರಕ್ಷಣೆ"ಯೇ ಆಗಿದೆ (1 ಪೇತ್ರ 1:9).

ನಂಬಿಕೆಯ ಮಹತ್ವವನ್ನು ನಾವು ಪರಿಗಣಿಸುವಂತೆಯೇ, "ನಾನು ನಂಬಿದ್ದೇನೆ; ನನಗೆನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು" ಎಂದು ಕೂಗಲು ನಾವೂ ಶೋಧಿಸಲ್ಪಡುತ್ತೇವೆ! ನಮ್ಮ ಅಧ್ಯಯನಕ್ಕೆ ಸಂಬಂಧಿಸಿದ ಆ ಮನುಷ್ಯನು ಮೊದಲು ವಿನಂತಿಯನ್ನು ಮಾಡಿದನು, ಆ ಅಂಶಗಳನ್ನು ನಾವು ಬಲಹೀನವಾದ ನಂಬಿಕೆ ಎಂದು ಪರಿಗಣಿಸಬಹುದು. ಎಲ್ಲಕ್ಕಿಂತ ಹೆಚ್ಚಾಗಿ, ನಂಬಿಕೆಯು ಹೇಗೆ ಬಲಪಡಿಸಲ್ಪಡುತ್ತದೆ ಎಂಬುದನ್ನು ಕಲಿಯಬೇಕಾಗಿದೆ.

## ನಂಬಿಕೆಯ ಪರೀಕ್ಷೆ

## (ಮತ್ತಾಯ 17:14-18; ಮಾರ್ಕ 9:14-27; ಲೂಕ 9:37-43)

ಕಥೆಯ ಆರಂಭದಲ್ಲಿ ಯೇಸು, ಪೇತ್ರ, ಯಾಕೋಬ ಮತ್ತು ಯೋಹಾನರು ರೂಪಾಂತರ ಬೆಟ್ಟದಿಂದ, ಶಾಂತವಾದ ಬೆಟ್ಟದ ತುದಿಯಿಂದ ಸಂಘರ್ಷದ ಕೊಳ್ಳಕ್ಕೆ ಕೆಳಗಿಳಿದು ಬಂದರು. ಅದು ಜೀವವಾಗಿತ್ತು ಮತ್ತು ದೇವರು ಏನು ಬಯಸಿದ್ದನೋ ಅದೇ ಆಗಿತ್ತು. ಪೇತ್ರನಂತೆ, ಕರ್ತನೊಡನೆ ಅಲ್ಲಿಯೇ ಬೆಟ್ಟದ ಮೇಲೆಯೇ ಇರಲು ನಾವೂ ಕೂಡಾ ಇಚ್ಛಿಸುವವರಾಗಿದ್ದೇವೆ (ಮತ್ತಾಯ 17:4), ಆದರೆ ಆ ಜೀವಿತವು ಎಲ್ಲಿ ಜನರಿರುತ್ತಾರೋ-ಎಲ್ಲಿ ಸಮಸ್ಯೆಗಳು ಇರುತ್ತವೆಯೋ ಅಲ್ಲಿ ಇರುವುದಾಗಿದೆ.

ಕ್ರಿಸ್ತನು ಮತ್ತವನ ಸಣ್ಣ ಗುಂಪು ತಾವು ಬಿಟ್ಟುಹೋಗಿದ್ದ ಒಂಬತ್ತು ಜನ ಅಪೊಸ್ತಲರೆಡೆಗೆ ತಲುಪಿದಾಗ "... ಅವರ ಸಂಗಡ ಶಾಸ್ತ್ರಿಗಳು ತರ್ಕಮಾಡುವುದನ್ನು ಕಂಡರು" (ಮಾರ್ಕ 9:14). ಬಹುಶಃ ಆ ಶಾಸ್ತ್ರಿಗಳು ಯೇಸುವಿನ ಸೇವೆಯ ಅರ್ಹತೆ ಮತ್ತು ಯಥಾರ್ಥತೆಯ ಬಗೆಗೆ ಸವಾಲು ಮಾಡುವವರಾಗಿದ್ದರು. ಆ ಚರ್ಚೆಯನ್ನು ಕುತೂಹಲದಿಂದ ನೋಡುತ್ತಿದ್ದ ಜನಜಂಗುಳಿಯು ಈ ದಿನದಲ್ಲಿ ಕಾರ್ ಅಪಘಾತಕ್ಕೊಳಗಾದಾಗ,[1] ಮತ್ತು ಇತರ ವಿನಾಶಗಳು ಸಂಭವಿಸಿದಾಗ ನೋಡುತ್ತಾ ನಿಲ್ಲುವ ಜನರಂತೆ ಅವರು ಇದ್ದರು.

### ದುರ್ಬಲನಾದ ಹುಡುಗ

ಯೇಸು ಸಮಸ್ಯೆಯು ಏನೆಂದು ಕೇಳಿದನು (ಮಾರ್ಕ 9:16). ಆತನು ಆ ಪರಿಸ್ಥಿತಿಯನ್ನು ಬಲ್ಲವನಾಗಿದ್ದನು, ಆದರೆ ಹೀನೈಸಲ್ಪಟ್ಟ ತನ್ನ ಶಿಷ್ಯರ ಲಕ್ಷವನ್ನು ತನ್ನೆಡೆಗೆ ತರಲು ಇಚ್ಛಿಸಿದ್ದನು. ಒಬ್ಬ ಮನುಷ್ಯನು ಜನಜಂಗುಳಿಯಿಂದ ಹೊರಗಡಿಯಿಟ್ಟನು. ಕ್ರಿಸ್ತನ ಕಾಲಿಗೆ ಬಿದ್ದು, "ಸ್ವಾಮೀ, ನನ್ನ ಮಗನನ್ನು ಕರುಣಿಸು" ಎಂದು ಕೂಗಿದನು (ಮತ್ತಾಯ 17:15ಎ).

ಆ ಮನುಷ್ಯನಿಗೆ ಆತನು ಒಬ್ಬನೇ ಮಗನಾಗಿದ್ದನು (ಲೂಕ 9:38) ಅವನು ಗಂಭೀರವಾಗಿ ಅನಾರೋಗ್ಯದಿಂದಿದ್ದನು: ಆ ಮಗನು ಕಿವುಡನೂ ಮತ್ತು ಮಾತನಾಡಲೂ ಬಾರದವನಾಗಿದ್ದನು[2] (ಮಾರ್ಕ 9:17, 25). ಆತನು ದೆವ್ವಹಿಡಿದವನಾಗಿದ್ದನು (ಮತ್ತಾಯ 17:18; ಲೂಕ 9:39, 42). ಆ ದೆವ್ವವು ಆತನನ್ನು ನೆಲದ ಮೇಲೆ ಕೆಡುವುತ್ತಿತ್ತು; ಆತನು ನೊರೆಸುರಿಸುತ್ತಾ ಕರಕರನೆ ಹಲ್ಲು ಕಡಿಯುತ್ತಾ ಕುಂದಿ ಹೋಗುತ್ತಿದ್ದನು (ಮಾರ್ಕ 9:18; ಲೂಕ 9:39). ದೆವ್ವದ ಕಾರಣದಿಂದ ಆತನು ಆಗಾಗ್ಗೆ ಬೆಂಕಿಯಲ್ಲಿಯೂ ನೀರಿನಲ್ಲಿಯು ಬೀಳುತ್ತಿದ್ದನು (ಮತ್ತಾಯ 17:15; ಮಾರ್ಕ 9:22).[3]

ಆ ತಂದೆಯು ಆತನನ್ನು "ಬುದ್ಧಿಭ್ರಷ್ಟನು" ಎಂದು ಕರೆದನು (ಮತ್ತಾಯ 17:15; ಮೂಲ ವೇದಭಾಗ). ಯಾಕೆಂದರೆ ಪ್ರಾಚೀನ ಕಾಲದದಲ್ಲಿನ ಮೂಢನಂಬಿಕೆಗಳಲ್ಲಿ ರೋಗದ ಸ್ಥಿತಿಯು ಚಂದ್ರನ ಕಾರಣದಿಂದ ಹಾಗಾಗುವನು ಎಂದು ನಂಬುವವರು ಆಗಿದ್ದರು. ಇದರ ಅಕ್ಷರ ಸಹ ಭಾಷಾಂತರವು "ಹುಚ್ಚು ಹಿಡಿದವ" ಎಂದಿದ್ದು (ನೋಡಿರಿ KJV ಮತ್ತು

ನವೀನವಾದ NASB). ಇದು ಚಂದ್ರನಿಂದ ಬಂದದ್ದಾಗಿದ್ದು ಲ್ಯಾಟಿನಿನಲ್ಲಿ ಇದಕ್ಕೆ "ಚಂದ್ರ" ಎಂದಿದೆ. ಯಾಕೆಂದರೆ "ಹುಚ್ಚು ಹಿಡಿದವ" ಪದವು "ವ್ಯಸನಿ" ಯಾದವನನ್ನು ಸೂಚಿಸಲು ಬಳಸುವಂತದ್ದಾಗಿದ್ದು, ಕೆಲಭಾಷಾಂತರದಲ್ಲಿ "ಮೂರ್ಛೆರೋಗ" ಎಂಬುದಕ್ಕೆ ಬದಲಾದ ಪದವಾಗಿದೆ (ನೋಡಿರಿ RSV ಮತ್ತು ASV). ಭಾಷಾಂತರಕಾರರು ಬಹುಶಃ ಇದನ್ನು ಮಾಡಿರಬಹುದು. ಯಾಕೆಂದರೆ ದೊಡ್ಡ ಮೂರ್ಛೆರೋಗಕ್ಕೆ ತುತ್ತಾಗುವಿಕೆಯ ಅನೇಕ ಲಕ್ಷಣಗಳು ಇದನ್ನು ಹೋಲುವವು ಆಗಿದ್ದವು. ಹೇಗೋ, ಈ ಲಕ್ಷಣಗಳು ಮೂರ್ಚಾರೋಗದ ಹೊಡೆತಕ್ಕೆ "ಮೆದುಳಿನ ಅಸಜ ನರವಾಹಿನಿಯ ಕಾರ್ಯ"ದ ಪರಿಣಾಮವು ಹೊಣೆಯಾಗಿಲ್ಲ,[4] ಆದರೆ ದೆವ್ವದ ಹಿಡಿಯುವಿಕೆಯಿಂದಲೇ (ಮತ್ತಾಯ 17:18; ಮಾರ್ಕ 9:25; ಲೂಕ 9:42.[5])

**ಆಶಾಭಂಗಗೊಂಡ ಬೋಧಕ**

ಸತಾಯಿಸುವ ಜನಜಂಗುಳಿ, ಕಲಹಮಗ್ನರಾದ ಶಾಸ್ತ್ರಿಗಳು, ದಿಗಿಲುಗೊಂಡ ಶಿಷ್ಯರು ಮತ್ತು ಅಪ್ರತಿಭನಾದ ತಂದೆ ಇವರ ಮುಂದೆ ಕರ್ತನು ಆತನ ಮುಂದೆ ಸನ್ನಿವೇಶಕ್ಕಾಗಿ ಕಾತುರದಿಂದ ಇದ್ದನು. "ಎಲ್ಲಾ ನಂಬಿಕೆಯಿಲ್ಲದಂಥ ಮೂರ್ಖ ಸಂತಾನವೇ, ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ? ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ?"[6] (ಮತ್ತಾಯ 17:17ಎ) ಎಂದು ಮಾನವನ ರೀತಿಯಲ್ಲಿ[7] ಯೇಸು ಉದ್ಗರಿಸಿದಂತಹ ಅಲ್ಪವಾದ ಕ್ಷಣಗಳನ್ನು ನಾವು ನೋಡುತ್ತಿದ್ದೇವೆ. "ನಾನು ಇನ್ನೆಷ್ಟು ದಿನ ನಿಮ್ಮ ಸಂಗಡ ಇರಲಿ?" ಎಂದು ಆತನು ಹೇಳುವುದನ್ನು ನಾವು ಕೇಳುವಾಗ ಆತನ ದೇಹದ ಭಾರವನ್ನು ಮತ್ತು ದೇವರೆಡೆಗೆ ಮರಳುವ ಆತನ ಅಭಿಲಾಷೆಯನ್ನು ನಾವು ಹಂಚಿಕೊಳ್ಳಬಹುದು. "ಇನ್ನೆಷ್ಟು ದಿನ ನಿಮ್ಮನ್ನು ಸಹಿಸಿಕೊಳ್ಳಲಿ?" ಎಂದು ಆತನು ಹೇಳುವುದನ್ನು ನಾವು ಕೇಳುವಾಗ ದೇಹದ ಜೊತೆಗಿರುವ ಮತ್ತು ಪೂರ್ವಾಗ್ರದಿಂದ ಕುರುಡಾದ ಮಾನವತೆ ಜೊತೆ ವ್ಯವಹರಿಸಲು ಪ್ರಯತ್ನಿಸುವ ಆತನ ಆಶಾಭಂಗವನ್ನು ನಾವು ಅನುಭಿಸುವವರಾಗಿದ್ದೇವೆ.

ಕ್ರಿಸ್ತನಿಂದ ಸಂಬೋಧಿತವಾದ "ನಂಬಿಕೆಯಿಲ್ಲದಂಥ ಮೂರ್ಖ ಸಂತಾನ" ಎಂಬ ಆ ಗುಂಪು ಒಂದು ಭಾಗವೆಂದು ಕೆಲವರು ಗುರುತಿಸುವವರಾಗಿದ್ದಾರೆ. ಅಲ್ಲಿ ಉಪಸ್ಥಿತವಿದ್ದ ನಂಬಿಕೆಯಿಲ್ಲದ ಶಾಸ್ತ್ರಿಗಳು, ಎರಡು ಮನಸ್ಸುಳ್ಳ ನಂಬಿಕೆಯ ಜನಸಮೂಹ, ಮುಗ್ಗರಿಸುವ ನಂಬಿಕೆಯನ್ನು ಹೊಂದಿದ ಆತನ ಶಿಷ್ಯರು ಮತ್ತು ಅಲುಗಾಡುವ ನಂಬಿಕೆಯನ್ನು ಹೊಂದದ ತಂದೆ ಇವರನ್ನು ಬಿಡುವ ಯಾವ ಕಾರಣಗಳು ನನಗೆ ಕಾಣುತ್ತಿಲ್ಲ.[8] ಎಲ್ಲರೂ "ನಂಬಿಕೆಯಿಲ್ಲದಂಥ ಮೂರ್ಖ ಸಂತಾನ"ಕ್ಕೆ ಯೋಗ್ಯರಾದವರು ಆಗಿದ್ದರು, ಮತ್ತು ನಾವಿರುವ ಜಗತ್ತಿನಲ್ಲಿರುವ ಸಾಮಾನ್ಯವಾಗಿ ಇರುವವರೂ ಆಗಿದ್ದಾರೆ.

ಯೇಸು ಆ ತಂದೆಯ ವಿನಂತಿಗೆ ಪ್ರತಿಕ್ರಯಿಸಿದನು. ಇದು "ಆತನ ದಾರಿದ್ರದಿಂದಲ್ಲ ... ಮನುಷ್ಯನ ನಂಬಿಕೆಯಿಂದಲ್ಲ, ಆದರೆ ಆತನ ಕೃಪೆಯಿಂದಲೇ" (ನೋಡಿ ಎಫೆಸ 1:7).[9] ಆತನು ಆ ತಂದೆಗೆ "ನಿನ್ನ ಮಗನನ್ನು ಇಲ್ಲಿಗೆ ಕರಕೊಂಡು ಬಾ" ಎಂದು ಹೇಳಿದನು (ಲೂಕ 9:41ಬಿ; ಇದನ್ನು ಸಹ ನೋಡಿರಿ ಮತ್ತಾಯ 17:17ಬಿ; ಮಾರ್ಕ 9:19ಬಿ).

**ಮುಗ್ಗರಿಸುವ ತಂದೆ**

ಅವರು ಆ ಹುಡುಗನನ್ನು ಯೇಸುವಿನೆಡೆಗೆ ತರುವಾಗ, ದೆವ್ವವು ಆ ಹುಡುಗನನ್ನು ವಿಪ್ಲವದಲ್ಲಿ ಕೆಡುವಿತು. ಆ ಚಿಕ್ಕ ಮಗನು "ನೆಲಕ್ಕೆ ಬಿದ್ದು ನೊರೆಸುರಿಸುತ್ತಾ ಹೊರಳಾ ಡಿದನು" (ಮಾರ್ಕ 9:20). ಕರ್ತನು ಆ ಹುಡುಗನ ಸ್ಥಿತಿಯ ಬಗೆಗೆ ಕೇಳಿದನು (ಮಾರ್ಕ 9:21) - ಹೊರತಾಗಿ ಆತನಿಗೆ ಅದರ ಬಗೆಗೆ ತಿಳಿಯುವದು ಅವಶ್ಯವಿತ್ತು ಎಂದಲ್ಲ, ಆದರೆ ಕ್ರಿಸ್ತನಿಲ್ಲದ ಆತನ ನಿರೀಕ್ಷೆರಹಿತತನವನ್ನು ಆ ತಂದೆ ಅರಿತುಕೊಳ್ಳುವದು ಅವಶ್ಯಕತೆ ಇದ್ದುದರಿಂದಲೇ. ಆ

ತಂದೆಯ ಉತ್ತರವು "ನಿನ್ನ ಕೈಲಿ ಏನಾದರೂ ಆಗುವ ಹಾಗಿದ್ದರೆ ನಮ್ಮ ಮೇಲೆ ಕರುಣೆಯಿಟ್ಟು[10] ನಮಗೆ ಸಹಾಯಮಾಡು" ಎಂಬ ಮಾತುಗಳು ಇದನ್ನು ಸಮಾರೋಪಿಸುವವು ಆಗಿವೆ (ಮಾರ್ಕ 9:22ಬಿ)!

"ನಿನ್ನ ಕೈಲಿ ಏನಾದರೂ ಆಗುವ ಹಾಗಿದ್ದರೆ" (ಮಾರ್ಕ 9:23ಎ; 1977 NASB) ಎಂಬ ಆ ಮನುಷ್ಯನ ಮಾತುಗಳನ್ನು ಪ್ರತಿಧ್ವನಿಸಿದಂತೆ ಕ್ರಿಸ್ತನ ಕಣ್ಣುಗಳು ಹೊಳೆದಿರಬಹುದು ಎಂದು ನಾನು ಸೂಚಿಸುವವಾಗ ಯೇಸುವಿನ ಉತ್ತರದ ಬಗೆಗೆ ಬಲುಮಾಗಿ ಎಳೆದರುವೆ ನೆಂದು ನನಗೆ ಅನ್ನಿಸುವುದಿಲ್ಲ. ಕರ್ತನು ತನ್ನ ಮಗನನ್ನು ವಾಸಿಮಾಡುವುದನ್ನು ಎದುರು ನೋಡುತ್ತಿರುವ ಆ ತಂದೆಯು ಕ್ರಮೇಣವಾಗಿ ನಂಬಿಕೆಯ ಜೊತೆ ಬರುತ್ತಿದ್ದಾನೆ. ಹೇಗೋ, ಶಿಷ್ಯರ ವಿಫಲತೆ, ಶಾಸ್ತ್ರಿಗಳ ದಾಳಿಯ ಮುಂದುವರಿಕೆ, ಇವುಗಳು ಆತನ ನಂಬಿಕೆಯನ್ನು ಕ್ಷೀಣವಾಗಿಸುತ್ತಿವೆ. "*ನಿನ್ನ ಕೈಲಿ ಏನಾದರೂ* ಆಗುವ ಹಾಗಿದ್ದರೆ ..." ಆತನ ಭಿನ್ನಹವು ಸಂಶಯದಿಂದ ಕಲುಷಿತಗೊಂಡಿತ್ತು.

ಯೇಸು ಆತನಿಗೆ "ನಂಬುವವನಿಗೆ ಎಲ್ಲಾ ಆಗುವದು" ಎಂದು ಹೇಳಿದನು (ಮಾರ್ಕ 9:23ಬಿ). ಈ ಬಲಯುತವಾದ ಹೇಳಿಕೆಗೆ ಎರಡು ಅಭಿಪ್ರಾಯಗಳನ್ನು ಮಾಡಬಹುದಾಗಿದೆ. ಒಂದೆಡೆಯಲ್ಲಿ, ಈ ಹೇಳಿಕೆಯನ್ನು ಬಹುವಾಗಿ ಅರ್ಥೈಸಿಕೊಳ್ಳ ಬೇಕಾದರೆ ಕೆಲ ಅರ್ಹತೆಗಳ ಅವಶ್ಯಕತೆಗಳು ಇವೆ. ಆ ಜನರು ಹೊಂದಿದ ಅಗಣಿತವಾದ ನಂಬಿಕೆಯನ್ನು, ಶರತ್ತುರಹಿತ ವಾದ ಅಧಿಕಾರವನ್ನು ಪ್ರತಿಪಾದಿಸುವದು ಹಾಸ್ಯಸ್ಪದವಾದದ್ದು ಆಗಿದೆ. ಇನ್ನೊಂದೆಡೆಯಲ್ಲಿ, ನಂಬಿಕೆಯುಳ್ಳ ಮಾನವನು ಯಾವದನ್ನು ಮಾಡುವವನಾಗಿದ್ದಾನೆಯೋ ಅದನ್ನು ಲಘವಾಗಿ ಪ್ರತಿಕ್ರಯಿಸಬಾರದು. ವಿಲಿಯಂ ಬಾರ್ಕ್ಲೇಲೆಯವರು ಹೀಗೆ ಬರೆಯುತ್ತಾರೆ: "ನಿರಾಶದಾಯಕ ವಾಗಿ ಯಾವುದೇ ಸಂಗತಿಯನ್ನು ಕೈಕೊಂಡಾಗ ಅದು ನಮಗೆ ನೈರಾಶ್ಯವನ್ನು ಉಂಟು ಮಾಡುತ್ತದೆ; ನಂಬಿಕೆಯ ಆತ್ಮದಲ್ಲಿ ಏನನ್ನಾದರೂ ಕೈಕೊಂಡಾಗ ಅದನ್ನು ಸಾಧ್ಯತೆಯನ್ನಾಗಿ ಮಾಡಬಹುದು."[11] "ಸಾಧ್ಯತೆಯ ಅರಿವಿನ" ಅವಶ್ಯಕತೆಯನ್ನು ಅವರು ಸೂಚಿಸಿದ್ದಾರೆ.[12]

ನಂತರ ಕ್ರಿಸ್ತನು "ನಂಬುವವನಿಗೆ ಎಲ್ಲಾ ಆಗುವದು" ಎಂದು ಹೇಳಿದನು. "ಕೂಡಲೇ ಆ ಹುಡುಗನ ತಂದೆಯು ನಂಬುತ್ತೇನೆ, ನನ್ನ ನಂಬಿಕೆ ಕಡಿಮೆಯಾಗಿದ್ದರೆ ಸಹಾಯಮಾಡು ಎಂದು ಕೂಗಿ ಹೇಳಿದನು" (ಮಾರ್ಕ 9:23ಬಿ, 24). ಈ ಪದಗಳು ಆತುರದ ಭಿನ್ನಹವನ್ನು ಸೂಚಿಸುವವುಗಳು ಆಗಿದ್ದು; "ನನ್ನ ನಂಬಿಕೆಯು ಎಷ್ಟಿರಬೇಕೋ ಅಷ್ಟಿಲ್ಲ, ಆದರೆ ಅದಕ್ಕಾಗಿ ನನ್ನ ಮಗನನ್ನು ದಂಡನೆಗೆ ಗುರಿಮಾಡಬೇಡ. ದಯಮಾಡಿ, ದಯಮಾಡಿ, ನನಗೆ ಸಹಾಯಿಸು!" ಎಂದು ಸೂಚಿಸುವವು ಆಗಿವೆ.

**ನಂಬಿಕೆಯನ್ನು ಪ್ರೇರೇಪಿಸುವ ಪ್ರಾಯೋಗಿಕತೆ**

ಯೇಸು ಆ ಹುಡುಗನೆಡೆಗೆ ತಿರುಗಿಕೊಂಡನು ಮತ್ತು "ಆ ದೆವ್ವವನ್ನು ಗದರಿಸಿ,[13] ಎಲೇ, ಕಿವಿಡಾದ ಮೂಗುದೆವ್ವವೇ, ಇವನನ್ನು ಬಿಟ್ಟು ಹೋಗು; ಇನ್ನು ಮುಂದೆ ಹಿಡಿಯ ಬೇಡವೆಂದು ನಾನು ನಿನಗೆ ಅಪ್ಪಣೆಕೊಡುತ್ತೇನೆ" ಎಂದು ಹೇಳಿದನು[14] (ಮಾರ್ಕ 9:25). "ಆ ದೆವ್ವವು ಆತನನ್ನು ಶಾಂತವಾಗಿ ಬಿಟ್ಟುಹೋಗಲಿಲ್ಲ. ಅದು ಅಬ್ಬರಿಸಿ ಅವನನ್ನು ಒದ್ದಾಡಿಸಿತು" (ಮಾರ್ಕ 9:26ಎ). R. Alan ಕೋಲೆ ಈ ಚಿತ್ರಣವನ್ನು "ಸೋತ ವೈರಿಯ [ಒಬ್ಬನ] ಮನೋವೈಕಲ್ಪ" ಎಂದು ವರ್ಣಿಸುತ್ತಾರೆ.[15] ಅಂತಿಮವಾಗಿ, ಬಿಡಲೊಲ್ಲದ ಮನಸ್ಸಿನಿಂದ ಆ ದೆವ್ವವು "ಬಿಟ್ಟುಹೋಯಿತು" (ಮಾರ್ಕ 9:26ಬಿ).

ಆ ಹುಡಗನು, ಘಾಸಿಗೊಳಗಾಗಿ ಮತ್ತು ಎಲ್ಲಾ ಮುಗಿದುಹೋದಂತೆ, ಚಲನೆಯಿಲ್ಲದವನಾಗಿ ನೆಲದ ಮೇಲೆ ಬಿದ್ದುಕೊಂಡನು. ಆತನು "ಸತ್ತಹಾಗೆ ಬಿದ್ದದ್ದರಿಂದ, ಬಹುಜನರು ಸತ್ತು ಹೋದ" ಅಂದರು! (ಮಾರ್ಕ 9:26ಸಿ). "ಆದರೆ ಯೇಸು ಅವನ ಕೈ ಹಿಡಿದು ಎಬ್ಬಿಸಲು ಅವನು ಎದ್ದು ನಿಂತನು" (ಮಾರ್ಕ 9:27). ನಂತರ ಬರುವದು ಸ್ಪಷ್ಟವಾದ ಕ್ಷಣವು ಅದು

ಆ ಹುಡುಗನನ್ನು "ಅವನ ತಂದೆಯ ಕೈಗೆ ಕೊಟ್ಟದ್ದೆ"[16] ಆಗಿದೆ (ಲೂಕ 9:42). ಮನುಷ್ಯರು ವಿಫಲರಾಗಬಹುದು, ಆದರೆ ಯೇಸು ಹಾಗಾಗಲಾರನು. ಈ ಸಂದರ್ಭದಲ್ಲಿ, ಬರ್ಟನ್ ಕಾಫ್‌ಮನ್ ಹೀಗೆ ಬರೆಯುತ್ತಾರೆ,

> ಎಲ್ಲಾ ಸಮಯದ ನಿತ್ಯತ್ವಕ್ಕಾಗಿನ, ಪ್ರವಾದನೆಯು ಇಲ್ಲಿದೆ. ಜನಾಂಗಗಳು ಕರ್ತನ ವಿರುದ್ಧ ಏಳಬಹುದು ಮತ್ತು ತಿರಸ್ಕರಿಸಲೂ ಬಹುದು; ಅವಿಶ್ವಾಸಿಗಳು ಕೋಪದಿಂದ ಕುದಿಯುವವರೂ ಮತ್ತು ಅಹಂಕಾರಿಗಳೂ ಆಗಿರಬಹುದು; ಮತ್ತು ಕರ್ತನ ಶಿಷ್ಯರೂ ಕೂಡಾ ತಮ್ಮ ಸ್ವಂತದ ಆತ್ಮೀಕ ಸಂಗತಿಗಳ ತಿರಸ್ಕರಿಸುವಿಕೆಯ ಮೂಲಕ, ಜೀವನ ಸಮಸ್ಯೆಗಳನ್ನು ನಿಭಾಯಿಸಲು ಅಸಮರ್ಥರಾಗಿರಬಹುದು; ಅದಲ್ಲದೆ ಕ್ರಿಸ್ತನೂ ಮತ್ತು ಆತನ ಪವಿತ್ರ ನಂಬಿಕೆಯೂ ಯಾವಾಗಲೂ ಯಶಸ್ವಿಯುತವಾಗಿರುತ್ತದೆ. "ಪರಲೋಕದ ಬಾಗಿಲುಗಳು" ಮೇಲುಗೈಯನ್ನು ಪಡೆಯಲಾರವು ...[17]

ತಿರುಗೊಂದಾವರ್ತಿ ಕ್ರಿಸ್ತನು ತನ್ನ ತಂದೆಯನ್ನು ಮಹಿಮೆಪಡಿಸಿದನು: ಜನರು ಆಶ್ಚರ್ಯಚಕಿತರಾಗಿ "ದೇವರ ಮಹತ್ವಕ್ಕೆ ಬೆರಗಾದರು" (ಲೂಕ 9:43).

## ನಂಬಿಕೆಯ ಶಕ್ತಿ
## (ಮತ್ತಾಯ 17:19-21; ಮಾರ್ಕ 9:28, 29)

ಯೇಸು ಏಕಾಂತವಾಗಿದ್ದಾಗ ಮತ್ತವನ ಶಿಷ್ಯರು ಆತನ ಬಳಿಗೆ ಬಂದು "ಅದನ್ನು ಬಿಡಿಸಕ್ಕೆ ನಮ್ಮಿಂದ ಯಾಕೆ ಆಗಲಿಲ್ಲ" ಎಂದು ಕೇಳಿದರು (ಮತ್ತಾಯ 17:19; ನೋಡಿರಿ ಮತ್ತಾಯ 9:28)[18] ಎಂದು ಕೇಳಿದರು. ಅವರು ನಿಜವಾಗಿ ಗಲಿಬಿಲಿಗೊಳಗಾಗಿದ್ದರು. ಕ್ರಿಸ್ತನು ಅವರಿಗೆ "ದೆವ್ವಗಳ ಮೇಲೆ ಮತ್ತು ಅವುಗಳನ್ನು ಬಿಡಿಸುವುದಕ್ಕಾಗಿಯೂ ಅಧಿಕಾರವನ್ನು ಕೊಟ್ಟಿದ್ದನು," ಮತ್ತು "ದೆವ್ವಗಳನ್ನು ಓಡಿಸಿರಿ" ಎಂದು ನಿಖರವಾಗಿ ಅವರಿಗೆ ಸೂಚಿಸಿದ್ದನು (ಮತ್ತಾಯ 10:1, 8; ನೋಡಿರಿ ಮಾರ್ಕ 6:7). ಇದನ್ನು ಅವರು ಮಾಡಿದ್ದರು; ಮಾರ್ಕನು ದಾಖಲಿಸಿದಂತೆ "ಅವರು ... ಅನೇಕ ದೆವ್ವಗಳನ್ನು ಬಿಡಿಸಿದ್ದರು" (ಮಾರ್ಕ 6:13ಎ). ಆದ್ದರಿಂದ ಅತಿಯಾಗಿ ಕಂಗೆಟ್ಟಿದ್ದ ಆ ತಂದೆಯು ಅವರಿಗೆ ತೋರಿಸಿದಾಗ, ಅವರು ಬಹುಶಃ ಯಾವ ಸಮಸ್ಯೆಯನ್ನು ನಿರೀಕ್ಷಿಸಿರಲಿಕ್ಕಿಲ್ಲ. "ಯೇಸುವಂತೂ ಸದ್ಯಕ್ಕೆ ಈಗ ಇಲ್ಲಿಲ್ಲ. ಆದರೆ ಚಿಂತಿಸಬೇಡ, ನಾವು ಅದರ ಬಗೆಗೆ ಯೋಚಿಸುತ್ತೇವೆ. ಕೇವಲ ನಿನ್ನ ಮಗನನ್ನು ಕರೆದುಕೊಂಡು ಬಾ!" ಎಂದು ಅವರು ದೃಢವಾಗಿ ಹೀಗೆ ಹೇಳುವುದನ್ನು ನಾನು ಊಹಿಸಿಕೊಳ್ಳಬಲ್ಲೆ. ದೆವ್ವವನ್ನು ಓಡಿಸಲು ತಿರುಗಿ ತಿರುಗಿ ಪ್ರಯತ್ನಿಸಿ ಅದು ಯಶಸ್ವಿಯಾಗದೇ ಹೋದಾಗ ಅವರ ಬೆಳೆಯುತ್ತಿರುವ ಮುಜುಗರವನ್ನು ನಾನು ಗ್ರಹಿಸಬಲ್ಲೆ.

### ನಂಬಿಕೆಯ ಕೊರತೆ

ಅವರ ಶ್ರಮವು ಯಾಕೆ ಪರಿಣಾಮರಹಿತವಾಯಿತು ಎಂಬುದನ್ನು ಯೇಸು ವಿವರಿಸಿದನು: "ನಿಮ್ಮ ನಂಬಿಕೆಯು ಕಡಿಮೆ ಆಗಿರುವುದರಿಂದಲೇ ಆಗಲಿಲ್ಲ"[19] (ಮತ್ತಾಯ 17:20ಎ). ಅಪೊಸ್ತಲರು ಅಲ್ಪ ನಂಬಿಕೆಯನ್ನು ಹೊಂದಿದ್ದರು, ಅಥವಾ ಆ ಹುಡುಗನನ್ನು ವಾಸಿಮಾಡಲು ಅವರು ಪ್ರಯತ್ನಿಸದೆ ಹೋಗಿರಬಹುದು; ಆದರೆ ಕೆಲ ರೀತಿಯಲ್ಲಿ ಅವರ ನಂಬಿಕೆಯು ಕೊರತೆಯನ್ನು ಹೊಂದಿತ್ತು. ಕರ್ತನು ಮುಂದುವರೆಸುತ್ತಾ, "ನಿಮಗೆ ಸತ್ಯವಾಗಿ ಹೇಳುತ್ತೇನೆ, ಸಾಸಿವೆಕಾಳಷ್ಟು ನಂಬಿಕೆ ನಿಮಗೆ ಇರುವುದಾದರೆ ನೀವು ಈ ಬೆಟ್ಟಕ್ಕೆ[20] ಇಲ್ಲಿಂದ ಅಲ್ಲಿಗೆ ಹೋಗು ಎಂದು ಹೇಳಿದರೂ ಅದು ಹೋಗುವದು ಮತ್ತು ಅದು ನಿಮ್ಮ ಕೈಯಿಂದಾಗದಂಥದ್ದು ಒಂದು ಇರುವುದಿಲ್ಲ"[21] ಎಂದು ಹೇಳಿದನು (ಮತ್ತಾಯ 17:20ಬಿ[22]).

ಕ್ರಿಸ್ತನ ಬೆಟ್ಟದ ದೃಷ್ಟಾಂತವು ಆಕರ್ಷಿತವಾದದ್ದಾಗಿದ್ದು ಮತ್ತು ಅನೇಕರನ್ನು

ಗಲಿಬಿಲಿಗೊಳಿಸುವದು ಆಗಿದೆ. ಆತನು ನಂತರದಲ್ಲಿ ನಂಬಿಕೆಯಿಂದ ಪ್ರಾರ್ಥಿಸುವುದರ ಮಹತ್ವವನ್ನು ಒತ್ತಿ ಹೇಳಲು ಅದೇ ರೀತಿಯ ದೃಷ್ಟಾಂತವನ್ನು ಆಕರ್ಷಿತವಾದದ್ದಾಗಿದ್ದು ಮತ್ತು ಅನೇಕರನ್ನು ಬಳಸಿದನು (ಮತ್ತಾಯ 21:21, 22; ಮಾರ್ಕ 11:22-24).[23] ಒಬ್ಬ ವೃದ್ಧೆಯು ಬೆಟ್ಟದಾಚೆಯ ಬಾವಿಯಿಂದ ನೀರನ್ನು ತರಲು ಬೆಟ್ಟವನ್ನು ಹತ್ತುವುದನ್ನು ನಾನು ನೆನಿಪಿಸಿಕೊಳ್ಳುತ್ತೇನೆ. ಈ ಪರಿಚ್ಛೇದವನ್ನು ಓದಿದ ನಂತರ ಆಕೆಯು "ದೇವಾ, ನಾನು ಖಂಡಿತವಾಗಿ ನಂಬುತ್ತೇನೆ! ದಯಮಾಡಿ ಈ ಬೆಟ್ಟವನ್ನು ತೆಗೆದು ಹಾಕು!" ಎಂದು ಪ್ರಾರ್ಥಿಸಿದಳು, ಆಕೆಯು ತನ್ನ ಪ್ರಾರ್ಥನೆಯಿಂದ ಮೇಲಕ್ಕೆ ನೋಡಿ, "ನಾನು ಯೋಚಿಸಿ ದಂತೆಯೇ ಇದೆ! ಇದು ಇನ್ನೂ ಇಲ್ಲಿಯೇ ಇದೆ!" ಎಂದು ಉದ್ಘರಿಸಿದಳು. ಸ್ಪಷ್ಟವಾಗಿ ಹೇಳು ವುದಾದರೆ, ಆಕೆಯ ಪ್ರಾರ್ಥನೆಯು ನಂಬಿಕೆ ರಹಿತ ಪ್ರಾರ್ಥನೆ ಆಗಿತ್ತು.

ಬಹುಶಃ ನಾವು ಈ ಪರಿಚ್ಛೇದದ ಜೊತೆ ಅನ್ಯಾಯವನ್ನು ಮಾಡುವವರಾಗಿದ್ದೇವೆ, ಹೇಗೋ, ಇದನ್ನು ನಾವು ಅಕ್ಷರಸಹ ಭೌತಿಕವಾಗಿ ಇಹಲೋಕದಿಂದ ಯೋಚಿತವಾದ ಪದಗಳಲ್ಲಿ ಯೋಚಿಸುವರಾಗಿದ್ದೇವೆ. ಯೇಸು ಮತ್ತು ಆತನ ಶಿಷ್ಯರು ಭೌತಿಕವಾಗಿ ಬೆಟ್ಟವನ್ನು ಸರಿಸಲು ಪ್ರಯತ್ನಿಸಿದ್ದು ಎಂದಿಗೂ ಸೂಚಿತವಾಗಿಲ್ಲ. ಇಂಥ ಅದ್ಭುತಗಳಲ್ಲಿ ಚಿಕ್ಕ ಉದ್ದೇ ಶಗಳಲ್ಲಿನ ಚಿಕ್ಕ ಉದ್ದೇಶಗಳು ಕರ್ತನ ಆತ್ಮೀಕ ಯೋಜನೆಯಲ್ಲಿ ಇರುವವುಗಳು ಆಗಿದ್ದವು.

ಕ್ರಿಸ್ತನ ದಿನದಲ್ಲಿ ಸಾಮಾನ್ಯವಾಗಿ ಬೆಟ್ಟಗಳನ್ನು ರೂಪಕವಾಗಿ ಉಪಯೋಗಿಸುತ್ತಿದ್ದರು. ಜನರಿಗೆ ಚಿರಪರಿತವಾಗಿರುವಂಥ ಬೆಟ್ಟವನ್ನು ದೊಡ್ಡ ಸಂಗತಿಗಳಿಗಾಗಿ ಬಳಸುತ್ತಿರಬಹುದು. ನಾವು ಅದಕ್ಕೆ ಸಮಾನವಾದ ಸಂಕೇತಾರ್ಥವನ್ನು ಹೊಂದಿದವನ್ನು "ಕೆಲಸದ ಬೆಟ್ಟದಡಿಯಲ್ಲಿ ಹೂಳಿದ"[24] ಅಥವಾ "ಮಣ್ಣಿನ ದಿಬ್ಬಗಳಿಂದ ಬೆಟ್ಟಗಳನ್ನು ಮಾಡುವ" ಎಂದು ನಾವು ಮಾತನಾಡುವಾಗ ಬಳಸುತ್ತೇವೆ.

ಯೆಹೂದಿಯರಲ್ಲಿ, "ಬೆಟ್ಟವನ್ನು ತೆಗೆದಿಡುವದು" ವಿಘ್ನವನ್ನು ಹತ್ತಿಕ್ಕುವದಕ್ಕಾಗಿನ ಸಾಮಾನ್ಯವಾದ ಚಿತ್ರಣವಾಗಿತ್ತು (ನೋಡಿರಿ ಯೆಶಾಯ 40:4; 49:11; 54:10). ದುಸ್ತರವೆಂದು ಕಾಣುವ ಅಡತಡೆಗಳನ್ನು ತೆಗೆದುಹಾಕುವುದನ್ನು ಸೂಚಿಸುವುದಕ್ಕಾಗಿ ರಬ್ಬಿಗಳು ಇದನ್ನು ಬಳಸುತ್ತಿದ್ದರು.[25] ಆ ರೀತಿಯಲ್ಲಿ ಮತ್ತಾಯ 17ರಲ್ಲಿ ಇದು ನಿಶ್ಚಿತವಾಗಿ ಇದು ಈಗಾಗಲೇ ಉಪಯೋಗಿತವಾಗಿದೆ. ಕಲ್ಮಷವನ್ನು ಮತ್ತು ಕಲ್ಲಿನ ಬೆಟ್ಟವನ್ನು ತೆಗೆದುಹಾಕುವದು ಮಕ್ಕಳಾಟ ವಾಗಿದ್ದು, ನಮ್ಮ ಜೀವಿತದಲ್ಲಿ ಎದುರಾಗುವ ಕೆಲ "ಬೆಟ್ಟಗಳನ್ನು" ಇದನ್ನು ಹೋಲಿಸಿದರೆ ಬಲು ದೊಡ್ಡವಾಗಿವೆ ಎಂಬುದನ್ನು ಗಮನಿಸಿರಿ. ಭೂಮಿಯನ್ನು ಅಲುಗಾಡಿಸುವ ಸಾಧನವೊಂದನ್ನು ನನಗೆ ಕೊಡಿರಿ, ಅಸಾಧನವನ್ನು ಬಳಸುವ ಒಂದು ಟೀಮನ್ನು ನನಗೆ ಕೊಡಿರಿ ಮತ್ತು ಯಾವುದೇ ಸಮಯದ ನಿರ್ಭಂಧವು ಇರಬಾರದು ಮತ್ತು ನಾನು ಹೆಚ್ಚು ಕಡಿಮೆ ಯಾವುದೇ ಭೌತಿಕ ಬೆಟ್ಟವನ್ನು ಕದಲಿಸಬಲ್ಲೆ. ನಾನು ಹಾಗೆ ಮಾಡಲಾರೆ. ಹೇಗೋ, ಮನುಷ್ಯನ ಮೇಲೆ ಬರುವ ಅನೇಕ ರೀತಿಯ ಕಷ್ಟದ ಬೆಟ್ಟಗಳ ಬಗೆಗೆ ಸಹ ಅದೇ ರೀತಿ ಎದುರಿಸಬಲ್ಲೆ ಎಂಬ ಆತ್ಮವಿಶ್ವಾಸವು ನನಗಿಲ್ಲ. ಅಪೊಸ್ತಲರ ಮುಂದೆ ನೋವು ಮತ್ತು ಹಿಂಸೆಯ ಬಹುವಾದ ಬೆಟ್ಟಗಳನ್ನು ಬಗೆಗೆ ಸಹ ಅದೇ ರೀತಿ ಎದರಿಸಬಲ್ಲೆ ಎಂಬ ಆತ್ಮವಿಶ್ವಾಸವು ನನಗಿಲ್ಲ.

ಅಪೊಸ್ತಲರು ಮುಂದೆ ನೋವು ಮತ್ತು ಹಿಂಸೆಯ ಬಹುವಾದ ಎದುರಿಸಬೇಕಾಗಿತ್ತು (ನೋಡಿರಿ ಮತ್ತಾಯ 5:11; ಅಪೊಸ್ತಲರ ಕೃತ್ಯಗಳು 8:1, 3). ಭೂಮಿಯ ಕಲ್ಲುಗಳ ರಾಶಿಯಿಂದ ಅವರು ಹೊರಬರುತ್ತಾರೆ ಎಂಬ ಆಶ್ವಾಸನೆಯ ಅವಶ್ಯಕತೆಯು ಅವರಿಗೆ ಇರಲಿಲ್ಲ. ಅವರನ್ನು ನೈರಾಶ್ಯಗೊಳಿಸಲು ಕಟ್ಟಲ್ಪಟ್ಟಂತ ಸೈತಾನನ ಪ್ರೇರೇಪಿತವಾದ ಮತ್ತು ಮಾನವ ನಿರ್ಮಿತವಾದ ಬೆಟ್ಟಗಳನ್ನು, ಕರ್ತನ ಸಹಾಯದಿಂದ ಸೆದೆಬಡಿಯಬಹುದೆಂದು *ತಿಳಿಯುವ* ಅವಶ್ಯಕತೆಯು ಅವರಿಗೆ ಇತ್ತು.

ಕ್ರಿಸ್ತನು ತನ್ನ ಹಿಂಬಾಲಕರಿಗೆ ಯಾವುದೇ ಕ್ಲಿಷ್ಟತೆಯಲ್ಲಿ ಇದ್ದಾಗ್ಯೂ, ಸಾಸಿವೆ ಕಾಳಿನಷ್ಟು ನಂಬಿಕೆ ಅವರಲ್ಲಿ ಇದ್ದಿದ್ದಾದರೆ ಅದರ ಮೇಲೆ ಅವರು ಜಯಸಾಧಿಸುವರು

ಎಂಬ ಆಶ್ವಾಸನೆಯನ್ನು ಇತ್ತಿದ್ದನು. ಸಾಸಿವೆ ಕಾಳು, ಒಂದು ಚಿಕ್ಕ ಕಾಳಾಗಿದ್ದು, ಅತಿ ಚಿಕ್ಕದ್ದನ್ನು ಹೇಳುವುದಕ್ಕೆ ಚಿಹ್ನೆಯಾಗಿ ಯೇಸುವಿನಿಂದ ಪದೇ ಪದೇ ಬಳಿಕೆಯಾಗಿದ್ದಾಗಿದೆ (ಮತ್ತಾಯ 13:31; ಲೂಕ 13:19; 17:5, 6). ಮತ್ತಾಯ 17:20ರಲ್ಲಿ, ಆತನ ಕೇಳುಗರಿಗೆ ಚಿರಪರಿಚಿತವಾದ ಅತಿ ಚಿಕ್ಕ ಸಂಗತಿ (ಸಾಸಿವೆ ಕಾಳು) ಮತ್ತು ಅತಿ ದೊಡ್ಡ (ಬೆಟ್ಟ)ದರ ಮಧ್ಯದ ವ್ಯತ್ಯಾಸವು ಇದೆ. ಹೀಗೆ ಕರ್ತನು ನಂಬಿಕೆಯ ಶಕ್ತಿಯ ಗುರುತರತೆಯನ್ನು ಒತ್ತಿ ಹೇಳುವವನಾಗಿದ್ದಾನೆ.

ಹೇಗೋ, ಕ್ರಿಸ್ತನು ಸಾಸಿವೆ ಕಾಳನ್ನು ತನ್ನ ದೃಷ್ಟಾಂತವಾಗಿ ಬಳಸುವಾಗ ತನ್ನ ಮನದಲ್ಲಿ ಕೇವಲ ಅದರ ಗಾತ್ರದ ಅಂಶವನ್ನು ಹೊಂದಿರಲಿಲ್ಲ. NASB ಯಲ್ಲಿ "ಸಾಸಿವೆ ಕಾಳಿನ ಗಾತ್ರದ ನಂಬಿಕೆ" ಎಂದಿದ್ದು, "ಗಾತ್ರ" ಎಂಬ ಪದವು ಮೂಲ ವೇದಭಾಗದಲ್ಲಿ ಇಲ್ಲ. ಗ್ರೀಕ್ ವೇದಭಾಗದಲ್ಲಿ ಇಲ್ಲ. ಗ್ರೀಕ್ ವೇದಭಾಗದಲ್ಲಿ "ಸಾಸಿವೆ ಕಾಳಿನಂತ ನಂಬಿಕೆ" ಎಂದಿದೆ (ನೋಡಿರಿ KJV; ಒತ್ತಿ ಹೇಳಿದ್ದು ನನ್ನದು). ಈ ಬೀಜಕ್ಕೆ ಅನೇಕ ಗುಣಗಳಿದ್ದು ನಾವು ಹೊಂದಬೇಕಾದ ನಂಬಿಕೆಗೆ ಸಂಬಂಧಿತವಾಗಿದೆ. ಉದಾಹರಣೆಗೆ,

- ಸಾಸಿವೆ ಕಾಳು ಚಿಕ್ಕದಾಗಿದೆ ಆದರೆ ನೈಜವಾದದ್ದಾಗಿದೆ.
- ಸಾಸಿವೆ ಕಾಳು ಚಿಕ್ಕದಾಗಿದೆ ಆದರೆ ಸಜೀವವಾದದ್ದಾಗಿದೆ, ಅದರಂತೆ ನಮ್ಮ ನಂಬಿಕೆಯೂ ಕೂಡಾ ಸಜೀವವುಳ್ಳದ್ದಾಗಿರ ಬೇಕು (ನೋಡಿ ಯಾಕೋಬ 2:26).
- ಸಾಸಿವೆ ಕಾಳು ಚಿಕ್ಕದಾಗಿದೆ ಆದರೆ, ಅದು ಬಲವಾದ ಸಾಮರ್ಥ್ಯಕ್ಕೆ ಶ್ರೇಷ್ಟ ಪ್ರೇರಕವಾಗಿವೆ (ನೋಡಿರಿ ಲೂಕ 13:19).
- ಸಾಸಿವೆ ಕಾಳು ಚಿಕ್ಕದಾಗಿದೆ ಮತ್ತು ಬಲಹೀನವಾಗಿದೆ, ಆದರೆ ಅದು ತನ್ನ ಸುತ್ತ ಇರುವ ಮಣ್ಣಿನಲ್ಲಿರುವ ಬಲವನ್ನು ವಿನಿಯೋಗಿಸುವುದಾಗಿದೆ.[26]

ನಾಲ್ಕನೆಯ ಗುಣವು ಅತಿ ಮಹತ್ವವಾದದ್ದು. ನಮ್ಮ ನಂಬಿಕೆಯ ಗಾತ್ರವು ನಮ್ಮ ನಂಬಿಕೆಯಲ್ಲಿ ಪ್ರಕಟಗೊಂಡಂತೆ ಮಹತ್ವದ್ದಲ್ಲ. ಪೌಲನು ಹೀಗೆ ಹೇಳಿದ್ದಾನೆ. "... ನಾನು ಎಲ್ಲಕ್ಕೂ ಶಕ್ತನಾಗಿದ್ದೇನೆ" (ಫಿಲಿಪ್ಪಿ 4:13ಎ). ಇದು "ನಂಬುವವನಿಗೆ ಎಲ್ಲಾ ಆಗುವದು" (ಮಾರ್ಕ 9:23ಬಿ). ಎಂಬುದನ್ನು ಹೆಚ್ಚಾಗಿ ಧ್ವನಿಸುವಂತಿದೆ. ಇಲ್ಲಿ ಲಕ್ಷಕೊಡಿ, ಹೇಗೋ, ಪೌಲನ ಹೇಳಿಕೆಯ ಕೊನೆಯಲ್ಲಿ "*ನನ್ನನ್ನು ಬಲಪಡಿಸುವಾತನಲ್ಲಿ* ಇದ್ದುಕೊಂಡು ಎಲ್ಲಕ್ಕೂ ಶಕ್ತನಾಗಿದ್ದೇನೆ" ಎಂದು ಹೇಳುತ್ತಾನೆ (ಫಿಲಿಪ್ಪಿ 4:13; ಒತ್ತಿ ಹೇಳಿದ್ದು ನನ್ನದು). ನಾವು ನಂಬು ವಾತನಲ್ಲಿ ಇಡುವಂತ ನಂಬಿಕೆಗೆ ಇದು ಬಲವನ್ನು ಕೊಡುವುದಾಗಿದೆ. ನೀವು ರಸ್ತೆಯಲ್ಲಿ ನಡೆಯುತ್ತಿದ್ದೀರಿ ಮತ್ತು ಬೋರ್ಗೆರೆಯುವ ನದಿಯ ಸೇತುವೆಯನ್ನು ನೀವು ದಾಟಿಹೋಗ ಬೇಕಾಗಿದೆ ಎಂದು ಊಹಿಸಿಕೊಳ್ಳಿರಿ. ಆ ಸೇತುವೆಯು ನಿಮ್ಮನ್ನು ದಾಟಿಸುವದು ಎಂದು ನಂಬುವತನಕ ನೀವು ಅದನ್ನು ದಾಟಲಾರಿರಿ. ಹೇಗೋ, ಅದನ್ನು ದಾಟಿ ಬಂದು, ಸೇತುವೆಯ ಮೇಲಿನ ನಿಮ್ಮ ನಂಬಿಕೆಯು ನಿಮ್ಮನ್ನು ಬೆಂಬಲಿಸಿತೇ ಅಥವಾ ಸೇತುವೆಯೋ? ನಾನು ಹೇಳುತ್ತಿರುವ ಸಂಗತಿಯನ್ನು ನೀವು ಗಮನಿಸಿದ್ದೀರಿ ಎಂದು ನಾನು ಆಶಿಸುವವನಾಗಿದ್ದೇನೆ: ನಮ್ಮ ನಂಬಿಕೆಯ ಗಾತ್ರದ ಬಗೆಗೆ ನಾವು ಯೋಚಿಸುವವರಾಗಿರದೆ ಯಾವುದರಲ್ಲಿ (ಅಥವಾ ಯಾರಲ್ಲಿ) ನಾವು ನಂಬಿಕೆಯಿಟ್ಟಿದ್ದೇವೆ ಎಂಬುದರ ಬಗೆಗೆ ಯೋಚಿಸುವವರಾಗಿರೋಣ.

ಯೇಸುವಿನ ಮಾತನ್ನು "ನಂಬುವವನಿಗೆ ಎಲ್ಲಾ ಆಗವದು" ಈ ಹೇಳಿಕೆಯು ಆತನ ನಂತರದ ಘೋಷಣೆಯಾದ "ದೇವ*ರೊಂದಿಗೆ* ಎಲ್ಲವೂ ಸಾಧ್ಯವೇ" (ಮತ್ತಾಯ 19:26; ಒತ್ತಿ ಹೇಳಿದ್ದು ನನ್ನದು) ಎಂಬುದು ಸಮಾಂತರವಾದದ್ದಾಗಿದೆ. ಶಕ್ತಿಯ ಮೂಲಕ್ಕೆ ಪ್ರತಿಯಾಗಿ ಯಾವ ಶಕ್ತಿಯೂ ಇಲ್ಲ. ಪೌಲನೂ "ನಾನು ನಂಬಿರುವಾತನನ್ನು ನಾನು ಬಲ್ಲೆನು; ...

*ಆತನು* ಆ ದಿನಕ್ಕಾಗಿ ಕಾಪಾಡುವುದಕ್ಕೆ ಶಕ್ತನಾಗಿದ್ದಾನೆಂದು ನಾನು ದೃಢವಾಗಿ ನಂಬಿದ್ದೇನೆ" (2 ತಿಮೋಥೆ 1:12; ಒತ್ತಿ ಹೇಳಿದ್ದು ನನ್ನದು) ಎಂದು ಹೇಳಿದ್ದಾನೆ. Hugo McCord ರವರು ಈ ವಚನದ ಮೊದಲ ಭಾಗವನ್ನು "ನಾನು ನಂಬಿರುವಾತನನ್ನು ನಾನು ತಿಳಿದಿದ್ದೇನೆ ..."[27] ಎಂದು ಭಾಷಾಂತರಿಸಿದ್ದಾರೆ.

**ಪ್ರಾರ್ಥನೆಯ ಲೋಕ**

ಇದೆಲ್ಲವನ್ನೂ ನೆನಪಿನಲ್ಲಿಟ್ಟುಕೊಂಡು, ಮಾರ್ಕನಿಂದ ದಾಖಲಿತವಾದಂತೆ, ಅಪೊಸ್ತಲರಿಗೆ ಯೇಸುವಿನ ಉತ್ತರವನ್ನು ಪರಿಗಣಿಸೋಣ. ಆ ಲೇಖಕನ ಪ್ರಕಾರ, ದೆವ್ವವನ್ನು ತಮ್ಮಿಂದ ಓಡಿಸಲು ಏಕಾಗಲಿಲ್ಲ ಎಂದು ಶಿಷ್ಯರು ಕೇಳಿದಾಗ, ಕರ್ತನು, "ಈ ಜಾತಿಯು[28] ದೇವರ ಪ್ರಾರ್ಥನೆ ಮತ್ತು ಉಪವಾಸದಿಂದಲೇ ಹೊರತು ಬೇರೆ ಯಾರಲಿಂದಲೂ ಬಿಟ್ಟು ಹೋಗುವುದಿಲ್ಲ"[29] ಎಂದು ಉತ್ತರಿಸಿದನು (ಲೂಕ 9:29) ಎಂದಾಗಿದೆ. ನಾವು ಈ ಹೇಳಿಕೆಯಿಂದ ಬೇರ್ಪಟ್ಟಾಗ, ಅಪೊಸ್ತಲರು ದೆವ್ವವನ್ನು ಓಡಿಸಲು ಪ್ರಯತ್ನಿಸಿದಾಗ ಅವರು ಅಸಮರ್ಥರಾದರು, ಯಾಕೆಂದರೆ ಅದನ್ನು ಮಾಡುವಾಗ ಅವರು ಪ್ರಾರ್ಥನೆ ಮಾಡುವುದರಲ್ಲಿ ವಿಫಲರಾದರು ಎಂಬ ಭಾವನೆಯನ್ನು ಬಿಡುವುದಾಗಿದೆ. ಹೇಗೋ, ನಾವು ಈ ಕಥೆಯನ್ನು ಪುನರಾವಲೋಕಿಸಿದಾಗ, ದೆವ್ವವನ್ನು ಓಡಿಸುವ ಮೊದಲು *ಯೇಸು* ಪ್ರಾರ್ಥನೆಯನ್ನು ಮಾಡಲಿಲ್ಲ ಎಂಬುದನ್ನು ನೀವು ನೋಡುವವರಾಗಿದ್ದೀರಿ. ಹೇಗೋ ಆತನು ದೆವ್ವಕ್ಕೆ ಆ ಹುಡುಗನನ್ನು ಬಿಟ್ಟು ಹೋಗು ಎಂದು ಹೇಳುವ ಮುನ್ನ ಬೆಟ್ಟದ ಮೇಲೆ ಒಂದು ರಾತ್ರಿ ತಂದೆಯ (ದೇವರ) ಅನ್ಯೋನ್ಯತೆಯಲ್ಲಿ ಕಳೆದಿದ್ದನು (ನೋಡಿರಿ ಲೂಕ 9:28).

ಬಲು ಹೆಚ್ಚಾಗಿ, ಶಿಷ್ಯರು ತಮ್ಮ ಜೀವಿತದಲ್ಲಿ ಸಾಮಾನ್ಯವಾಗಿ ಪ್ರಾರ್ಥನೆಯನ್ನು ಮರೆತು ಬಿಟ್ಟಿದ್ದರು ಎಂದು ಪ್ರಾರ್ಥನೆಯ ಆಧಾರವು ಸೂಚಿಸುವುದಾಗಿದೆ. ಪ್ರಾರ್ಥನೆಯು ಅಧ್ಭುತವಾದ ಸಂಗತಿಗಳು ಸಂಭವಿಸುವುದನ್ನು ಮಾಡುವ "ಮಾಂತ್ರಿಕ ಪದಗಳನ್ನು" ಹೇಳುವುದಿಲ್ಲ; ಪ್ರಾರ್ಥನೆಯು ಸೃಷ್ಟಿಕರ್ತನ ಮೇಲೆ ಆತನು ಕೊಳ್ಳುವಿಕೆಯನ್ನು ಅರಿತುಕೊಳ್ಳುವದು ಆಗಿದೆ. ಅಪೊಸ್ತಲರು ದೆವ್ವವ್ವನ್ನು ಓಡಿಸುವಲ್ಲಿ ವಿಫವಾಗಿದ್ದಕ್ಕೆ ಕಾರಣ ಅವರ ನಂಬಿಕೆಯು ದೇವರ ಮೇಲಿನಿಂದ ತಮ್ಮ ಸ್ವಂತ ಸಾಮರ್ಥ್ಯದ ಮೇಲೆ ವರ್ಗಾವಣೆಗೊಂಡಿದ್ದೇ ಎಂದು ಅನೇಕ ಲೇಖಕರು ಒಪ್ಪಿಕೊಳ್ಳುವವರಾಗಿದ್ದಾರೆ. ಅವರು ಸೂಚಿಸುವುದೇನೆಂದರೆ ಅವರು (ಶಿಷ್ಯರು) "ದೇವರ ಮೇಲೆ ವಿಶ್ವಾಸವುಳ್ಳವುಗಳ ಬದಲಾಗಿ ಪ್ರಜ್ಞಾಪೂರ್ವಕವಾಗಿ ಸಂಪೂರ್ಣವಾಗಿ ಆತ್ಮವಿಶ್ವಾಸವಳ್ಳವು"[30] ಆಗಿದ್ದರು. ಸಂಸೋನನಂತೆ ಯುದ್ಧದಿಂದ ಹೊರಗೆ ಬಂದರು. ಅವರು ತಮ್ಮ ಶಕ್ತಿಯನ್ನು ಅರಿಯದೆ ನಿರ್ಗಮಿಸಿದರು (ನ್ಯಾಯಸ್ಥಾಪಕ 16:20).

ನಮ್ಮೆಲ್ಲರಿಗೂ ಎಷ್ಟು ಸರಳವಾಗಿ ಇದು ಸಂಭವಿಸುವುದಾಗಿದೆ! ದೇವರು ನಮ್ಮ ಪರಿಶ್ರಮಕ್ಕೆ ನಮಗೆ ವರಗಳನ್ನೂ ಮತ್ತು ಆಶೀರ್ವಾದಗಳನ್ನೂ ಕೊಡುತ್ತಾನೆ, ಮತ್ತು ಈ ಕಾರಣದಿಂದ ನಮ್ಮ ಶಕ್ತಿಯಲ್ಲಿ ನಂಬಿಕೆಯಿಡುವ ತನಕ, ನಮ್ಮ ವಿವೇಕ ನಿರ್ಧಾರವನ್ನು ಮಾಡುವ ತನಕ ಮತ್ತು ನಮ್ಮ ಸಾಮರ್ಥ್ಯವನ್ನು ಪ್ರದರ್ಶಿಸುವ ತನಕ ಇದು ದೀರ್ಘವಾಗಿರುವುದಿಲ್ಲ. ಅದು ಸಂಭವಿಸಿದಾಗ, ಆತ್ಮೀಕ ವಿನಾಷವು ನಮ್ಮಿಂದ ದೂರವಾಗಿರುವುದಿಲ್ಲ!

ಬೆಂಕಿಯು ಉರಿಯುತ್ತಾ ಇರುವಾಗ, ಇದು ನಿರಂತರವಾಗಿ ಪೋಷಿಸುವುದಾಗಿದೆ.[31] ಬ್ಯಾಟರಿಯು ನಿರಂತರವಾಗಿ ಬೆಳಕನ್ನು ಕೊಡುತ್ತಿರಬೇಕಾದರೆ ಅದಕ್ಕೆ ಪುನಃ ಪುನಃ ಚಾರ್ಜು ಮಾಡುವ ಅವಶ್ಯಕತೆಯು ಇದೆ. ಒಬ್ಬನ ಆತ್ಮೀಕ ಜೀವಿತವು ಬಲಯುತವಾಗಿರಬೇಕಾದರೆ, ಆತನು ದೇವರೊಡಗಿನ ತಮ್ಮ ಸಂಬಂಧವನ್ನು ಪುನಃ ನೂತನವಾಗಿಸುತ್ತಾ ಬರ ಬೇಕು! ಯಾಕೋಬನು "ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು" ಎಂದಿದ್ದಾನೆ (ಯಾಕೋಬ 4:8ಎ). ಪ್ರವಾದಿಯಾದ ಯೆಶಾಯನು "ಯೆಹೋವನನ್ನು ನಿರೀಕ್ಷಿಸುವರೋ ಹೊಸಬಲವನ್ನು ಹೊಂದುವರು; ಹದ್ದುಗಳಂತೆ ರೆಕ್ಕೆ ಬಾಚಿಕೊಂಡು ಏರುವರು;

ಓಡಿ ದಣಿಯರು, ನಡೆದು ಬಳಲರು.'' ಎಂದು ಬರೆಯುತ್ತಾನೆ (ಯೆಶಾಯ 40:31).

## ನಂಬಿಕೆಯ ಮೂಲಗಳು

ಈ ಕಥೆಯನ್ನು ಸಮೀಕ್ಷಿಸುವಾಗ, ಕೆಲ ಕ್ಷಣಗಳನ್ನು ವೈಯಕ್ತಿಕ ಅನ್ವಯಕ್ಕಾಗಿ ತೆಗೆದುಕೊಳ್ಳುವಾ.[32]

**ಸಂಶಯದ ಮೂಲ**

ಈ ವಿವರಣೆಯಲ್ಲಿ ಮೊದಲು ಹೊರಬರುವ ಸಂಗತಿಯು ಈ ಸ್ಥಿತಿಯಲ್ಲಿ ತನ್ನ ನಂಬಿಕೆಯೊಡನೆ ಹೋರಾಡುವವರನ್ನು, ಅಪೊಸ್ತಲರ ತಂದೆಯನ್ನೂ ಹಿಡಿದು ಅನೇಕರನ್ನು, ಇದು ಒಳಗೊಂಡಿದೆ. ಇಂದೂ ಜನರು ತಮ್ಮ ನಂಬಿಕೆಗಾಗಿ ಹೋರಾಡುವವರಾಗಿರುತ್ತಾರೆ. ಯಾಕೆ ಅನ್ನುವ ಕೆಲ ಕಾರಣಗಳು ನಮ್ಮ ವೇದಭಾಗದಲ್ಲಿ ಕಂಡುಬರುವುದಿಲ್ಲ.

*ಕೆಡುಕನ (ಸೈತಾನನ) ಸಮಸ್ಯೆಗಳು.* ಬಹುಶಃ ಒಂದನೆಯ ನಂಬಲಿನ ಕಾರಣವು ಒಳ್ಳೆಯ ಜನರಿಗೆ ಕೆಟ್ಟದ್ದು ಸಂಭವಿಸುವುದು ಎಂದು ಜನರು ನೋಡಿದ್ದೇ ಈ ಸಂಶಯಕ್ಕೆ ಕಾರಣ ಆಗಿದೆ. ಈ ಘಟನೆಯಲ್ಲಿ, ಈ ಹುಡುಗನು ಈ ಭೀಕರ ತೊಂದರೆಗೆ ಅರ್ಹನಾಗುವಂಥದ್ದನ್ನು ಏನಾದರೂ ಮಾಡಿದ್ದನು ಎಂಬುದರ ಸೂಚನೆಯನ್ನು ನಾವು ಕಾಣುವುದಿಲ್ಲ. ಒಳ್ಳೆಯ ಜನರಿಗೆ ಯಾಕೆ ಕೆಟ್ಟದ್ದು ಸಂಭವಿಸುತ್ತದೆ ಎಂಬುದಕ್ಕೆ ಯಾವುದೇ ತ್ವರಿತ ಉತ್ತರವು ಸಿಕ್ಕುವುದಿಲ್ಲ,[33] ಆದರೆ ನಮ್ಮ ಕಥೆಯ ಎರಡು ಸಂಗತಿಗಳು ಗಮನಿಸಲು ಯೋಗ್ಯವಾದವುಗಳು ಆಗಿವೆ: (1) ಅಂತ್ಯದಲ್ಲಿ, ಪ್ರತಿಯೊಂದು ಸರಿಯಾಗಿ ಅಂತ್ಯಗೊಳ್ಳುತ್ತದೆ ಮತ್ತು (2) ಯೇಸು ಆ ಸಂದರ್ಭವನ್ನು ತನ್ನ ತಂದೆಯನ್ನು ಮಹಿಮೆಪಡಿಸಲು ಬಳಸುತ್ತಾನೆ (ಲೂಕ 9:43).[34]

*ಶಿಷ್ಯರ ಮಹತ್ವ.* ತಾವು ಎಲ್ಲಿ ಯಶಸ್ವಿಯಾಗಬೇಕಿತ್ತೊ ಅಲ್ಲಿ ಅಪೊಸ್ತಲರು ವಿಫಲರಾದರು. ಕ್ರೈಸ್ತರ ನ್ಯೂನ್ಯತೆಗಳಿಂದ ಮತ್ತು ದೇವರಲ್ಲಿನ ತಮ್ಮ ನಂಬಿಕೆಯ ಈ ಪ್ರಭಾವವನ್ನು ಇಳಿಸುವುದರಿಂದ ಜನರು ಕೆಲಸಾರಿ ಭರಮನಿರಸನರಾಗುತ್ತಾರೆ. ನಮ್ಮ ನಂಬಿಕೆಯು ನಮ್ಮನ್ನು ಸದಾನಿರಾಶನನ್ನಾಗಿಸುವ ಮನುಷ್ಯರ ಮೇಲಲ್ಲ ಆದರೆ ತನ್ನನ್ನು ನಂಬಿದವರನ್ನು ಆಶಾಭಂಗಪಡಿಸದವನ ಮೇಲಿರಬೇಕು ಎಂದು ಅರಿತುಕೊಳ್ಳು ಅವಶ್ಯಕತೆಯು ಅವರಿಗೆ ಇದೆ (ಕೀರ್ತನೆ 9:10).

*ಜಗತ್ತಿನ ದಾಳಿಗಳು.* ಆ ತಂದೆಯು ಶಿಷ್ಯರ ವಿಫಲತೆಯಿಂದ ಮಾತ್ರವಲ್ಲ, ಶಾಸ್ತ್ರಿಗಳ ಆಕ್ರಮಣದಿಂದಲೂ ಬಲಹೀನನಾದನು. ನಂಬಿಕೆಯನ್ನು ಘೋಶಿಸುವ ಪ್ರತಿಯೊಂದು ಪೀಠಕ್ಕೂ, ಸಂಶಯವನ್ನು ವ್ಯಕ್ತಪಡಿಸಲು ಸೈತಾನನು ಸಾವಿರಮಾರ್ಗಗಳನ್ನು ಇಟ್ಟಿರುತ್ತಾನೆ - ಮತ್ತು ಇದು ಜನಸಮೂಹಕ್ಕೆ ಪ್ರತಿಕೂಲವಾದ ಪರಿಣಾಮವನ್ನು ಉಂಟುಮಾಡುವುದಾಗಿದೆ. ಅಪನಂಬಿಕೆಯತ್ತ ನಡೆಸುವ ಸಂದೇಶಕರಿಂದ ನಮ್ಮ ಕಿವಿಗಳನ್ನು ಮುಚ್ಚಿಕೊಳ್ಳಲು ಮತ್ತು ಸುವಾರ್ತಿಕರ ಸತ್ಯಕ್ಕಾಗಿ ಕಿವಿಗಳನ್ನು ತೆರೆಯಲು ಕಲಿಯಬೇಕು.

*ಆದರದೆ ಆದ ಸ್ವ ನೈಜತ್ವ.* ತನ್ನ ನಂಬಿಕೆಯ ಬಲಹೀನತೆಯನ್ನು ಒಪ್ಪಿಕೊಳ್ಳಲು ಕಾರಣವಾದ ಆ ತಂದೆಯು ಸ್ವಪರೀಕ್ಷೆಗೆ ಒತ್ತಾಯಿಸಲ್ಪಟ್ಟದ್ದನ್ನು ಯೇಸು ಗದರಿಸಿದನು. ನಾವು ನಮ್ಮೊಂದಿಗೆ ಪ್ರಾಮಾಣಿಕರಾಗಿದ್ದದ್ದೇ ಆದರೆ, ನಾವೇನು ಆಗಿರಬೇಕಿತ್ತೋ ಅದು ನಾವಾಗಿಲ್ಲ ಎಂದು ನಾವು ತಿಳಿಯಬಲ್ಲೆವು. ಎಲ್ಲಾ ಅಂಶಗಳನ್ನು ಒಟ್ಟಾಗಿ ಇಟ್ಟಾಗ ನಮ್ಮಲ್ಲಿ, ಕೆಲವರು ಹೆಚ್ಚಿನದನ್ನು ಮಾಡುವವರಾಗಿದ್ದಾರೆ ಎಂಬುದರ ಈ ನೈಜತ್ವವು ವಿರಾಮ ಹಾಕುವುದಾಗಿದೆ. ಉತ್ಸಾಹಭಂಗವು, ಸಂಶಯವನ್ನು ಉತ್ಪಾದಿಸುವ ನಿರಾಶೆಯತ್ತ ನಡೆಸುವುದಾಗಿದೆ. ಈ ಹಿಂದೆ ಮಾಡಿದ ಹೇಳಿಕೆಯನ್ನು ಗುರುತುಹಾಕಿರಿ: (ಹುಡುಗನ) ತಂದೆಯ ನಂಬಿಕೆಯ ಕೊರತೆಯ ಪ್ರಕಾರ ಯೇಸು ಆತನಿಗೆ ಪ್ರತಿಕ್ರಯಿಸಲಿಲ್ಲ, ಆದರೆ ಆತನ ಮಹಿಮೆಯ ಶ್ರೀಮಂತಿಕೆಯಿಂದಲೇ. ನೀವು ಉತ್ಸಾಹಭಂಗವಾದಾಗ ಈ ಸತ್ಯವನ್ನು ಇಟ್ಟುಕೊಳ್ಳಿರಿ.

ಇವುಗಳು ಮತ್ತು ಇತರ ಅಂಶಗಳು ಅನೇಕ ನಂಬಿಕೆಗಳಲ್ಲಿ ತಮ್ಮ ಪರಿಣಾಮ ಬೀರುವಂತವು ಆಗಿವೆ. ಅವುಗಳು ನಮಗೆ ಪ್ರತಿಕೂಲವಾಗಿಯೂ ಇರಬಹುದು. ಲೇಖಕರಾದ John Westerhoff ನಂಬಿಕೆಯ,[35] ನಾಲ್ಕು ವಿಧಗಳನ್ನು ವರ್ಣಿಸಿದ್ದಾರೆ: (1) *ಅನುಭವಯುಕ್ತವಾದ ನಂಬಿಕೆ* ಮಕ್ಕಳ ಮೇಲಿನ ನಂಬಿಕೆ ಆಗದ್ದು, ಅದು ಅವರು ತಮ್ಮ ಪೋಷಕರು ಮತ್ತು ಇತರರಿಂದ ಅನುಭವಿಸಿದ್ದಾಗಿರುತ್ತದೆ. (2) *ಸ್ವೀಕರಿಸಿದ ನಂಬಿಕೆಯು*[36] ದೊಡ್ಡ ಮಕ್ಕಳ ಮತ್ತು ಅನೇಕ ವಯಸ್ಕರ ಮೇಲಿನ ನಂಬಿಕೆ ಆಗಿದ್ದು, ಆ ನಂಬಿಕೆಯ ಅಳತೆಯು ಯಾರ ಮೇಲೆ ನಂಬಿಕೆಯನ್ನು ಹೊಂದಿರುತ್ತಾರೋ ಅವರಿಂದ ಪಡಕೊಂಡಿದ್ದು ಆಗಿದೆ. (3) *ಹುಡುಕುವ ನಂಬಿಕೆಯು* ಪ್ರಶ್ನೆಗಳನ್ನು ಕೇಳುವ ನಂಬಿಕೆ ಆಗಿದ್ದು, ವೈಯಕ್ತಿಕ ನಂಬಿಕೆ ಆಗದು ಅದು ಹೋರಾಡುವ ನಂಬಿಕೆ ಆಗಿದೆ. (4) *ಸ್ವಂತಮಾಡಿಕೊಂಡ ನಂಬಿಕೆ* ವೈಯಕ್ತಿಕ ನಂಬಿಕೆ ಆಗಿದ್ದು, ಮೂರನೆಯ ಹಂತವನ್ನು ಮೀರಿ ಯಶಸ್ವಿಯುತವಾದದ್ದನ್ನು ಅಭಿವೃದ್ಧಿ ಪಡಿಸಿಕೊಂಡ ನಂಬಿಕೆಯು ಇದಾಗಿದೆ. ಶೇಕಡ 70ರಷ್ಟು ಜನರು ಎರಡನೆಯ ಹಂತವನ್ನು ದಾಟಲಿಲ್ಲ ಎಂದು ಇದು ಸೂಚಿಸುವುದಾಗಿದೆ. ಒಬ್ಬ ವ್ಯಕ್ತಿಯು ಎರಡನೆ ಹಂತವನ್ನು ಮೀರಿ ಪ್ರಗತಿ ಹೊಂದದೆ ಹೋದದ್ದಾದರೆ, ಆ ವ್ಯಕ್ತಿಯ ಜೀವಿತದ ಕೆಲ ವಿಷಯದಲ್ಲಿ ನಂಬಿಕೆಯನ್ನು ಅಲ್ಲಾಡಿಸುವಂಥದ್ದು ಏನೋ ಸಂಭವಿಸಿದೆ,[37] ಮತ್ತು ಕರ್ತನೊಡನೆಯ ಸಂಬಂಧವನ್ನು ಆತನ ಜೀವಿತವು ಪರಿತ್ಯಜಿಸುವಂತೆ ಮಾಡಿತು ಎಂದು ಮುಂದೆ ಇದು ಸೂಚಿಸುವುದಾಗಿದೆ.

ಏನೇ ಆಗಲಿ ನೀವು ಈ ಸಮಾರೋಪಗಳನ್ನು ಒಪ್ಪಿಬಿಡುತ್ತೀರಿ, ನಂಬಿಕೆಯು ಬೆಳೆಯಬೇಕು ಎಂದು ನಾವು ಒಪ್ಪುವವರಾಗಿದ್ದೇವೆ ಮತ್ತು ನಮ್ಮಲ್ಲಿ ಅನೇಕರು ಆಸ್ಥಿತಿಯನ್ನು ಮುಟ್ಟಲು ದೂರವಾಗಿದ್ದಾರೆ. "ನಾನು ನಂಬಿದ್ದೇನೆ; ನನಗೆ ನಂಬಿಕೆ ಕಡಿಮೆಯಾಗಿದ್ದರೂ ಸಹಾಯಮಾಡು" ಆ ತಂದೆ ಮಾತುಗಳು ಇನ್ನೂ ನಮ್ಮನ್ನು ಇರಿಯುತ್ತಾ ಇವೆ.

**ನಂಬಿಕೆಯ ಮೂಲಗಳು**

"ಅಪನಂಬಿಕೆಯು" ಹೇಗೆ ತಾನೇ ಸಹಾಯಿಸಬಲ್ಲದು? ನಮ್ಮ ನಂಬಿಕೆಯು ಬೆಳೆಯಬೇಕಾದರೆ ಯಾವುದು ಕಾರಣವಾಗಬಹುದು? ಪ್ರಾರಂಭದ ಸಂಗತಿಯ ಆ ತಂದೆಯು ಮಾಡಿದ ಹಾಗೆ ನಮ್ಮ ಅವಶ್ಯಕತೆಯನ್ನು ನಾವು ತಿಳಿದುಕೊಳ್ಳಬೇಕು, ಆದರೆ ಅಲ್ಲಿಂದ ನೀವು ಎಲ್ಲಿಗೆ ಹೋಗುವಿರಿ? ನಮ್ಮ ವೇದಭಾಗವನ್ನು ಬಳಸುತ್ತಾ ನಂಬಿಕೆಯ ಮೂಲಗಳನ್ನು ಹುಡುಕುವಾ.

*ಕಲಿಯುವದು.* ಯೇಸು ದೆವ್ವವನ್ನು ಓಡಿಸಿದ್ದರ ಕಾರಣವು ಆತನು ಎದುರಿಸಿದ ಅಪನಂಬಿಕೆಯನ್ನು ತೆಗೆದುಹಾಕುವುದೇ ಆಗಿತ್ತು. ಆತನು ಅದನ್ನು ಸಂಪೂರ್ಣವಾಗಿ ಮಾಡಿ ಮುಗಿಸಿದಾಗ ಜನರು "ದೇವರ ಮಹತ್ವಕ್ಕೆ ಬೆರಗಾದರು" (ಲೂಕ 9:43ಎ). ಕ್ರಿಸ್ತನು ಇಂದು ಅದ್ಭುತಗಳನ್ನು ಮಾಡುತ್ತಾ ನಮ್ಮ ಮಧ್ಯ ನಡೆದಾಡುತ್ತಿಲ್ಲ, ಆದರೆ ಆತನು ಮಹತ್ಕಾರ್ಯಗಳ ದಾಖಲೆಯು ಇನ್ನು ನಮ್ಮನ್ನು ಪ್ರಭಾವಗೊಳಿಸುತ್ತಾ ಇದೆ. ಯೋಹಾನನು ಹೀಗೆ ಬರೆಯುತ್ತಾನೆ,

> ಯೇಸು ಇನ್ನೂ ಬೇರೆ ಎಷ್ಟೋ ಸೂಚಕಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿಲ್ಲ. ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು *ನೀವು ನಂಬುವಂತೆಯೂ ನಂಬಿ* ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದಿದೆ (ಯೋಹಾನ 20:30, 31; ಒತ್ತಿ ಹೇಳಿದ್ದು ನನ್ನದು).

ದೇವವಾಕ್ಯವನ್ನು ಅಭ್ಯಾಸಿಸುವಾಗ ಅದರಲ್ಲೂ ವಿಶೇಷವಾಗಿ ಯೇಸುವಿನ ಬಗೆಗಿನ ವಾಕ್ಯವನ್ನು ಓದುವಾಗ "ನಂಬಿಕೆಯನ್ನು ಹೇಗೆ ಕಟ್ಟಬೇಕು ಎಂಬುದಕ್ಕೆ ಉತ್ತಮವಾದ

ಉತ್ತರವು ಇದಾಗಿದೆ. ಆತನ ಮರಣಿಸುವ ಮೊದಲಿನ ರಾತ್ರಿ, ಕ್ರಿಸ್ತನು ತನ್ನ ಅಪೊಸ್ತಲರಿಗಾಗಿ ಮತ್ತು *ಇವರ ವಾಕ್ಯದಿಂದ* ನನ್ನನ್ನು ನಂಬುವವರಿಗೋಸ್ಕರ ಸಹ" ಎಂದು ಪ್ರಾರ್ಥಿಸಿದನು (ಯೋಹಾನ 17:20; ಒತ್ತಿ ಹೇಳಿದ್ದು ನನ್ನದು). "ಸಾರಿದ ವಾರ್ತೆಯು ನಂಬಿಕೆಗೆ ಆಧಾರ, ಆ ವಾರ್ತೆಗೆ ಕ್ರಿಸ್ತನ ವಾಕ್ಯವೇ ಆಧಾರ" ಎಂದು ಪೌಲನು ಬರೆಯುತ್ತಾನೆ (ರೋಮಾಪುರ 10:17). "ಕ್ರಿಸ್ತನ ವಾಕ್ಯ" ಎಂಬ ಪದ ಅರ್ಥವು "ಕ್ರಿಸ್ತನ ಬಗೆಗಿನ *ಸಂದೇಶ*" ಎಂದಾಗಿದೆ.[38] ನಿನ್ನ ನಂಬಿಕೆಯು ಬೆಳೆಯಬೇಕು ಎಂದು ನೀವು ಬಯಸಿದ್ದಾದರೆ ದೇವರ ವಾಕ್ಯವನ್ನು ಓದಿರಿ ಮತ್ತು ಅಧ್ಯಯನ ಮಾಡಿರಿ (ನೋಡಿರಿ ಅಪೊಸ್ತಲರ ಕೃತ್ಯಗಳು 17:11; 2 ತಿಮೊಥೆ 2:15; KJV).

*ಜೀವಿಸುವದು.* ಸಂಪೂರ್ಣಜ್ಞಾನವನ್ನು ಮುಂದೆ ಹೊಂದಿರುವ ಇದು ಅಸಂಪೂರ್ಣವಾದದ್ದಾಗಿದೆ. ನಂಬಿಕೆಯು ನೈಜವಾದದ್ದು ಮತ್ತು ಸಜೀವವಾದದ್ದು (ಸಾಸಿವೆ ಕಾಳನ್ನು ನೆನಪಿಡಿರಿ), ಇದು ಕಾರ್ಯಯುಕ್ತವಾದದ್ದಾಗಿದೆ (ಯಾಕೋಬ 2:22). ಕಾರ್ಯದ ಮೂಲಕ ಪರಿಪೂರ್ಣವಾಗುವುದಾಗಿದೆ ಎಂದು ಯಾಕೋಬನು ಬೋಧಿಸುತ್ತಾನೆ (ಯಾಕೋಬ 2:20) ಮತ್ತು "ಆತ್ಮವಿಲ್ಲದ ದೇಹವು ಸತ್ತದ್ದಾಗಿರುವ ಪ್ರಕಾರವೇ ಕ್ರಿಯೆಗಳಿಲ್ಲದ ನಂಬಿಕೆಯೂ ಸತ್ತದ್ದೇ" (ಯಾಕೋಬ 2:26) ಆತನು ಬರೆಯುತ್ತಾನೆ.

ಏನನ್ನು ಮಾಡದೆ ಇರುವುದಕ್ಕೆ ಬಲಹೀನವಾದ ನಂಬಿಕೆಯನ್ನು ನೆವವಾಗಿ ಬಳಸುವುದರಿಂದ ಎಚ್ಚರವಾಗಿರ್ರಿ. ನಾವು "ಅಯೋಗ್ಯ ಸೇವಕರಾಗಿದ್ದಾಗಲೂ" (ಲೂಕ 17:10), ನಾವ ಸೇವೆ ಮಾಡುವದು ಅವಶ್ಯವಾದದ್ದಾಗಿದೆ (ಮತ್ತಾಯ 20:26). "ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೆಂದು ನನಗೆ ಗೊತ್ತಿಲ್ಲದ್ದರಿಂದ" (ರೋಮಾಪುರ 8:26), ನಾವು ಇನ್ನೂ ಪ್ರಾರ್ಥಿಸುವುದು ಅವಶ್ಯವಿದೆ (1 ಥೆಸಲೋನಿಕ 5:17). ನಮ್ಮ ನಂಬಿಕೆಯು ಹಾಗೆಯೇ.

ನಾವು ಸವಾಲನ್ನು ಎದರಿಸುವಾಗ, "ಈ ಪರಿಸ್ಥಿತಿಯಲ್ಲಿ ನಂಬಿಕೆಯು ಏನು ಮಾಡುವುದಾಗಿದೆ?" ಎಂದು ನಾವು ಕೇಳಿಕೊಳ್ಳಬೇಕು ಮತ್ತು ಅದನ್ನು ಮಾಡಬೇಕು ಎಂದು ಕೆಲವರು ಸೂಚಿಸುವವರಾಗಿದ್ದಾರೆ. "ಈ ದಿನ ನಾನು ವಿಶ್ವಾಸಿಯಾಗಿ ಜೀವಿಸುವೆ" ಎಂದು ಖಂಡಿತವಾಗಿ ಹೇಳುವ ಮೂಲಕ ಪ್ರತಿದಿನವೂ ಪ್ರಾರಂಭಿಸಬೇಕು.

*ಬಿಡುವದು ಮತ್ತು ಕಲಿಯುವದು.* ಇನ್ನೊಂದು ಸೂಚನೆಯೂ ಕೊಡಲ್ಪಟ್ಟಿದೆ: ನಂಬಿಕೆಯನ್ನು ಹಾಳುಮಾಡುವಂಥದ್ದನ್ನು[39] ಅಲಕ್ಷಿಸುವದು ಮತ್ತು ನಂಬಿಕೆಯನ್ನು ಪ್ರೋತ್ಸಾಹಿಸುವಂಥದ್ದನ್ನು ಸಂಸ್ಕರಿಸುವಂತದ್ದು ನಮಗೆ ಅವಶ್ಯವಿದೆ (ನೋಡಿ 1 ಕೊರಿಂಥ 15:33; 2 ತಿಮೋಥೆ 1:5). ಇದು ನಂಬಿಕೆಯನ್ನು ಕಟ್ಟುವ ಮಾಹಿತಿಯನ್ನು ನಮ್ಮ ಮನದಲ್ಲಿ ತುಂಬುವುದೂ ಆಗಿದೆ (ಫಿಲಿಪ್ಪಿ 4:8). ತಿರುಗಿ, ದೇವರೆಡೆಗೆ ಇನ್ನೂ ಹತ್ತಿರಕ್ಕೆ ಹೋಗಲು ಅವಷ್ಯವಾ ದದ್ದೆಲ್ಲವನ್ನು ಮಾಡುವದು ನಮಗೆ ಅವಷ್ಯವಿದೆ (ಯಾಕೋಬ 4:8) ಮತ್ತು ಆತನ ಮೇಲೆ ಆತುಕೊಳ್ಳುವುದನ್ನು ಕಲಿಯುವದು ನಮಗೆ ಅವಷ್ಯವಿದೆ (ಕೀರ್ತನೆ 37:5).[40] ಇದು ನಮ್ಮ ಪ್ರಾರ್ಥನಾ ಜೀವಿತವನ್ನು ಬಲಗೊಳಿಸುವುದಾಗಿದೆ[41] (ಎಫೆಸ 1:18; ಯೂದ 20) ಮತ್ತು ದೇವವಾಕ್ಯದ ಮೇಲೆ ಧ್ಯಾನ ಮಾಡುವ ಪುರಾತನ ಕಲೆಯನ್ನು ಕಲಿಸುವುದಾಗಿದೆ.[42] ವಾಕ್ಯದ ಬಗೆಗೆ (ಕೀರ್ತನೆ 1:2) ಮತ್ತು ದೇವರು ನಮಗೋಸ್ಕರ ಮತ್ತು ಇತರರಿಗೋಸ್ಕರ ಏನನ್ನು ಮಾಡಿದ್ದಾನೆ (ಕೀರ್ತನೆ 143:5) ಎಂದು ಯೋಚಿಸುತ್ತಾ ಸಮಯ ಕಳೆಯುವ ಅವಶ್ಯಕತೆಯು ನಮಗಿದೆ. ಪಟ್ಟಿಯು ಹೀಗೆಯೇ ಬೆಳೆಯುತ್ತಾ ಹೋಗುತ್ತದೆ.[43]

## ಮುಕ್ತಾಯ

ನಿಮ್ಮ ನಂಬಿಕೆಯನ್ನು ಪರೀಕ್ಷೀಸಲು ಈ ಪಾಠವು ಸವಾಲನ್ನೆಬ್ಬಿಸುವುದಾಗಿ ಎಂದು ನಾನು ಆಶಿಸುವವನಾಗಿದ್ದೇನೆ. ಬಲು ಮಹತ್ವದ್ದೆಂದರೆ, ನಿಮ್ಮ ನಂಬಿಕೆಯನ್ನು

ಬಲಪಡಿಸುವುದಕ್ಕಾಗಿ ನೀವು ಸವಾಲುಳ್ಳವರು ಆಗಿರ್ರಿ ಎಂದು ಪ್ರಾರ್ಥಿಸುವವನಾಗಿದ್ದೇವೆ. ಬೇಗನೇ ಅಥವಾ ನಂತರದಲ್ಲಿ, ನಮ್ಮಲ್ಲಿ ಎಲ್ಲರೂ ಬೆಟ್ಟದಿಂದ ಕೆಳಗಿಳಿದು ಗಲಿಬಿಲಿಯ ಕೊಳಕ್ಕೆ ಬಂದವರಾಗಿದ್ದೇವೆ. ವೈಯಕ್ತಿಕವಾದ ಬಲವಾದ ನಂಬಿಕೆಯನ್ನ ಬೆಳಿಸಿಕೊಂಡು ನಿನ್ನ ಜೀವಿತವು ನಿಯಂತ್ರಣ ತಪ್ಪಿಹೋಗುವವರೆಗೆ ಕಾಯಬೇಡ. ನಂಬಿಕೆಯನ್ನು ಕಟ್ಟುವ ಸಮಯವು ಈಗಲೇ ಆಗಿದೆ. ನಿನಗಾಗಿ ನಮ್ಮ ಪ್ರಾರ್ಥನೆಯು ಪೇತ್ರನಿಗಾಗಿ ಯೇಸು ಮಾಡಿದ ಪ್ರಾರ್ಥನೆಯೇ ಆಗಿದೆ: "ನಿನ್ನ ನಂಬಿಕೆಯು ಕುಂದಿಹೋಗಬಾರದು" (ಲೂಕ 22:32) ಎಂದು ನಾನು ಪ್ರಾರ್ಥಿಸುತ್ತೇನೆ.

ನೀನು ಕರ್ತನಲ್ಲಿ ನಂಬಿಕೆಯಿಡುತ್ತೀಯಾ? ನೀನು ಹಾಗೆ ಮಾಡಿದ್ದಾದರೆ, ಅದನ್ನು ಧೈರ್ಯವಾಗಿ ಅರಿಕೆಮಾಡು (ಮತ್ತಾಯ 10:32; 1 ತಿಮೊಥೆ 6:12; 1 ಯೋಹಾನ 4:15; ಯೋಹಾನ 12:42). ನಿನ್ನ ಪಾಪಗಳಿಗಾಗಿ ನೀನು ಪಶ್ಚಾತ್ತಾಪಪಡದೆ ದೀಕ್ಷಾಸ್ನಾನ ಹೊಂದದಿದ್ದರೆ, ನಿನ್ನ ಪಾಪಗಳನ್ನು ಅರಿಕೆ ಮಾಡುವದು ಮತ್ತು ನಂಬಿಕೆಯನ್ನು ವ್ಯಕ್ತಪಡಿಸುವ ನಿಟ್ಟಿನಲ್ಲಿ ನೀರಿ ನಲ್ಲಿ ಮುಳುಗುವದು ನಿನಗೆ ಅವಶ್ಯವಿದೆ (ಅಪೊಸ್ತಲರ ಕೃತ್ಯಗಳು 2:36-38; ಮಾರ್ಕ 16:15, 16; ಗಲಾತ್ಯ 3:26, 27). ನಂತರ ನಿನ್ನ ನಂಬಿಕೆಯನ್ನು ಕಟ್ಟುತ್ತಾ, ನೀನು ಜೀವನ ಪೂರ್ತಿ ಕರ್ತನೊಡನೆ ಸಮಯ ಕಳೆ (ಎಫೆಸ 2:13)!

## ಮಾಹಿತಿ

ನೀವು ಅನುಪ್ರಾಸವನ್ನು ಬಯಸುವಿರಾದರೆ, ಶಾಸ್ತ್ರಿಗಳ ಮತ್ತು ಅವರ ನಂಬಿಕೆ ಕೊರತೆ, ಜನಸಮೂಹ ಮತ್ತು ಅವರ ಕಳೆದು ಹೋದ ನಂಬಿಕೆ ಮತ್ತು ಅಪೊಸ್ತಲರು ಹಾಗೂ ಅವರ *ಮಿತಿಯುಳ್ಳ* ನಂಬಿಕೆಯನ್ನು ಯೇಸುವಿನಿಂದ ಸೂಚಿಸಲ್ಪಟ್ಟ *ಚಿಕ್ಕ* (ಆದರೆ ಬೆಳೆಯುತ್ತಿರುವ) *ನಂಬಿಕೆಗೆ* ಹೋಲಿಸಿ ಅದರ ಬಗೆಗೆ ಮಾತನಾಡಬಹುದು.

ಇದಕ್ಕೆ ಇನ್ನೊಂದು ಶೀರ್ಷಿಕೆಯು "ಸಾಸಿವೆ ಕಾಳಿನ ನಂಬಿಕೆ" ಎಂದಾಗಬಹುದು. ಈ ಪಾಠಕ್ಕೆ ಒಂದು ಪ್ಯಾಕೆಟ್ ಸಾಸಿವೆ ಕಾಳನ್ನು ವಸ್ತಿನಿಷ್ಟವಾಗಿ ನೀವು ಬಳಸಬಹುದು. ನಿಮ್ಮ ಕೇಳುಗರು ನೆನಪಿಡಬೇಕೆಂದು ಮೂಲ ವಿಚಾರದೊಂದಿಗೆ ಕಾರ್ಡನ್ನು ಕೈಗಳಲ್ಲಿ ಕೊಡಲು ನೀವು ಮಾಡಬಹುದು. ಪ್ರತಿಯೊಂದರ ಮೇಲೆ ಚಿಕ್ಕ ಸಾಸಿವೆಕಾಳನ್ನು ಇರಿಸಬಹುದು.

ನಿಮ್ಮ ಕೇಳುಗರಿಗೆ ಹುಡುಗನ ದೆವ್ವವನ್ನು ಬಿಡಿಸಿದ ಈ ಘಟನೆಯು ಚಿರಪರಿಚಿತವಾಗಿದ್ದಾದರೆ, ಆ ಕಥೆಯನ್ನು ವಿವರವಾಗಿ ಪುನರಾವಲೋಕಿಸಿಕಿ ಮತ್ತು ಹೆಚ್ಚಿನ ಸಮಯವನ್ನು ಸಂಶಯವನ್ನು ಹುಟ್ಟಿಸುವಂಥ ಮತ್ತು ನಂಬಿಕೆಯನ್ನು ಹುಟ್ಟಿಸುವಂಥ ಅನ್ವಯದಲ್ಲಿ ಕಳೆಯಿರಿ.

ನಂಬಿಕೆಯ ಬಗೆಗಿನ ಹಾಡುಗಳು, "ನಾನು ನಂಬುವಾತನನ್ನು ನಾನು ಬಲ್ಲೆನು" ಮತ್ತು "ನಂಬಿಕೆಯೇ ವಿಜಯವಾಗಿದೆ" ಎಂಬ ಹಾಡುಗಳನ್ನು ಒಳಗೊಂಡ ಹಾಡುಗಳು ಪ್ರಸಂಗದ ಮುಂಚೆ ಮತ್ತು ನಂತರ ಹಾಡಲ್ಪಡಲಿ.

---

ಟಿಪ್ಪಣೆಗಳು

[1]"ಕೂಡಲೇ ಆ ಗುಂಪಿನವರೆಲ್ಲರೂ ಯೇಸುವನ್ನು ಕಂಡು ಬಹು ಆಶ್ಚರ್ಯಪಟ್ಟು" ಎಂದು ಮಾರ್ಕ 9:15 ಹೇಳುತ್ತದೆ. ಆತನು ರೂಪಾಂತರ ಹೊಂದಿದಾಗ ಕ್ರಿಸ್ತನನ್ನು ಜನರು ಒಂದು ರೀತಿಯಲ್ಲಿ ಕಾಣುತ್ತಿರುವದು ಅವರು ಆಶ್ಚರ್ಯಪಡುವುದಕ್ಕೆ ಕಾರಣ ನಾವು ಯೋಚಿಸಲಿಕ್ಕಿಲ್ಲ (ಮೋಶೆ ಬೆಟ್ಟದಿಂದ ಇಳಿದು ಬಂದಾಗ ಆತನ ಮುಖವ ಹೊಳೆಯುತ್ತಿತ್ತು) ಯೇಸು ಅಷ್ಟು ಬೇಗನೇ ಮರಳುತ್ತಾನೆ ಎಂದು (ಮಾರ್ಕ 9:9) ಜನರು ನೆನಸಿರಲಿಲ್ಲ ಆದ್ದರಿಂದ ಅವರು ಬಹು ಆಶ್ಚರ್ಯಪಟ್ಟರು. [2]ಆ ಹಡುಗನು

ಕೂಗಿಕೊಂಡಿರಬಹುದು (ಲೂಕ 9:39), ಆದರೆ ಆತನವು ಸ್ಪಷ್ಟಮಾತುಗಳು ಆಗಿರಲಿಲ್ಲ. ಆ ಹುಡುಗನು ದೈಹಿಕ ಜಾಡ್ಯದಿಂದ ಮತ್ತು ದೆವ್ವದ ಹಿಡಿತದಿಂದ ಬಳಲುತ್ತಿದ್ದನು ಎಂಬುದರ ಬಗೆಗೆ ಕೆಲ ಸೂಚನೆಗಳು ಅಲ್ಲಿ ಇವೆ. ವೇದಭಾಗವು "ಸ್ವಸ್ಥವಾಯಿತು" ಎಂಬ ಪದವನ್ನು ಇಲ್ಲಿ (ಮತ್ತಾಯ 17:18) ಮತ್ತು "ವಾಸಿಯಾದನು" ಎಂದು ಬಳಸಲ್ಪಟ್ಟ (ಲೂಕ 9:42), ಪದಗಳು ಸಾಮ್ಯವಾಗಿ ಸುವಾರ್ತೆಯ ವಿವರಣೆಯಲ್ಲಿ ದೈಹಿಕ ವಾಸಿಯಾಗುವಿಕೆಗಾಗಿ ಬಳಸಲ್ಪಡುವವು ಆಗಿವೆ, ಹೊರಡು ದೆವ್ವವನ್ನು ಓಡಿಸಲು ಅಲ್ಲ. [3]ಹೆಚ್ಚಿನ ಮನೆಗಳ ಮಧ್ಯದ ಭಾಗದ ಬೆಂಕಿಯಿರುತ್ತಿತ್ತು, ಮತ್ತು ಅನೇಕ ಹಳ್ಳಿಗಳಿಗೆ ಸೇತುವೆಗಳು ಇರಲಿಲ್ಲ. ಆ ಹುಡುಗನನ್ನು ಬೆಂಕಿಯಲ್ಲಿ ಮತ್ತು ನೀರಿನಲ್ಲಿ ಬೀಳಿಸುವದು ದೆವ್ವಕ್ಕೆ ಸುಲಭವಾಗಿತ್ತು. ಆತನ ಮಗನನ್ನು ನಾಶಮಾಡುವುದೇ ಆ ದೆವ್ವದ ವಿಚಾರವಾಗಿತ್ತು ಎಂದು ಆ ತಂದೆಯು ಹೇಳಿದನು (ಮಾರ್ಕ 9:22); ಎಲ್ಲಕ್ಕಿಂತ ಹೆಚ್ಚಾಗಿ ಆ ಕೆಟ್ಟ ಆತ್ಮದ ಉದ್ದೇಶವು ಆ ಹುಡುಗನಿಗ ತೊಂದರೆ ಕೊಡಬೇಕೆನ್ನುವುದೇ ಆಗಿತ್ತು. ದೆವ್ವವು ಚಿಕ್ಕನಿಂದಿನಿಂದಲೇ ಆವನಲ್ಲಿ ಇತ್ತು. [4]Charles B. Clayman, medical ed., *The American Medical Association Home Medical Encyclopedia,* vol. 1, s.v. "Epilepsy." [5]ಅಂಧವಿಶ್ವಾಸದ ಜನಸಮೂಹವು ಆ ಹುಡುಗನ ತೊಂದರೆಯ ನೈಜ ಸ್ವಾಭಾವವನ್ನು ಅಪಾರ್ಥಮಾಡಿಕೊಂಡಿರಬೇಕು, ಆದರೆ ಆ ಕೆಲ ಜನರು ಆ ಹುಡುಗನಿಗೆ ದೆವ್ವ ಹಿಡಿದದೆ ಎಂದರು. ಅದು ಪ್ರೇರಣೆಯಲ್ಲಿ ನಂಬಿಕೆಯಿಡುವವರಿಗೋಸ್ಕರ ಪ್ರಶ್ನೆಯನ್ನು ಇಡುವುದಾಗಿದೆ. [6]ನಾವು ಕೂಡಾ ಕರ್ತನೊಡನೆ ಕರುಣೆಯೊಂದಿರಬಹುದು. ಒಂದು ವೇಳೆ ನೀವು ಇದನ್ನು ಹೇಳದೆ ಹೋದರೂ ಕೂಡ, "ಎಷ್ಟರವರಗೆ ನಾನು ಇದನ್ನು ಧರಿಸಿರಬೇಕು?" ಕಡೇಪಕ್ಷ ಇದನ್ನು ನೀವು ಯೋಚಿಸಬಹುದು. [7]ಹಳೆಯ ಒಡಂಬಡಿಕೆಯಲ್ಲಿನ ಅನೇಕ ಲೇಖಕರ ಟಿಪ್ಪಣೆಗಳು ಅದೇ ತರದ ಹೇಳಿಕೆಯನ್ನು ಹೊಂದಿದೆ (ನೋಡಿರಿ ಅರಣ್ಯಕಾಂಡ 14:27; ಧರ್ಮೋಪದೇಶಕಾಂಡ 32:5, 20; ಕೀರ್ತನೆ 95:10). [8]ಅಲ್ಲಿ ಉಪಸ್ಥಿತವಿದ್ದವರಲ್ಲಿ ಯಾವುದೇ ಪ್ರಶ್ನೆಯಿಲ್ಲದೆ ಕ್ರಿಸ್ತನಲ್ಲಿ ನಂಬಿಕೆಯಿಟ್ಟ ಒಬ್ಬರು ಎಂದರೆ ಅದು ದೆವ್ವ ... ಅದರ ಬಗೆಗೆ ನಾವಿನ್ನು ಮಾತಾಡಿಲ್ಲ. [9]R. Alan Cole, *The Gospel According to Mark,* rev. ed., Tyndale New Testament Commentaries (Grand Rapids, Mich.: Wm. B. Eerdmans Publishing Co., 1989), 216. [10]"ನಮ್ಮ" ಎಂಬ ಪದವನ್ನು ಗಮನಿಸಿರಿ. ರೋಗಗಳು ಮಗುವಿನ ಮೇಲೆ ಅಷ್ಟೇ ಅಲ್ಲೆ ಇಡೀ ಕುಟುಂಬದ ಮೇಲೆ ಪರಿಣಾಮ ಬೀರುವವು ಆಗಿವೆ ಎಂದು ರೋಗಗ್ರಸ್ತನಾದ ಮಗುವಿನೊಡನೆಯ ಇರುವ ಯಾವುದೇ ಪೋಷಕರು ಬಲ್ಲವರಾಗಿದ್ದಾರೆ.

[11]William Barclay, *The Gospel of Mark,* rev. ed. (Philadelphia: Westminster Press, 1975), 218. ನಂಬಿಕೆಯ ಮೇಲಿನ ಅಧಿಕಾರದ ಮೇಲಿನ ವ್ಯಾಖ್ಯಾನದಲ್ಲಿ, ನೀವು ನಂಬಿಕೆಯ ಸಂಗತಿಗಳ ಮೇಲೆ ಹೆಚ್ಚಾಗಿ ಒತ್ತುಕೊಡಬಾರದು ಎಂಬುದರ ಬಗೆಗೆ ಜಾಗರೂಕರಾಗಿರಿ. ಮಾರುಕಟ್ಟೆಯಲ್ಲಿ ಉತ್ತನ ಮಾರಾಟದಲ್ಲಿರುವ ಪುಸ್ತಕವು ದೇವರ ಶಕ್ತಿಗಿಂತಲೂ ಹೆಚ್ಚಾಗಿ ಮನುಷ್ಯನ ವ್ಯಕ್ತಿಗತ ನಂಬಿಕೆಯನ್ನು ಕೇಂದ್ರಿಕರಿಸುವುದೇ ಆಗಿವೆ. [12]Ibid. ಇಟಲಿಯ ರಾಜಕಿಯ ನಾಯಕರಾದ Camillo Benso di Cavour (1810-61) ರವರು ರಾಜ ನೀತಿ ನಿಪುಣರಿಗೆ ಇಂತಹ ಭಾವನೆ ಇರಬೇಕು ಎಂದು ಹೇಳಿದ್ದನ್ನು Barclay ಅವರು ಉಲ್ಲೇಖಿಸಿದರು. [13]ಆಗ ಯೇಸು ಜನರ ಗುಂಪು ಓಡಿಬರುವುದನ್ನು ಕಂಡು ಇದನ್ನು ಮಾಡಿದನು ಎಂದು ಮಾರ್ಕ 9:25 ಹೇಳುತ್ತದೆ. ಪ್ರಚಾರವನ್ನು ಬಯಸದ ಆತನು ಆ ತಂದೆ ಮತ್ತು ಆ ಹುಡುಗನನ್ನು ಒಂದೆಡೆ ಕರೆದು ಕೊಂಡು ಹೋಗಿರುವುದನ್ನು ಇದು ಸೂಚಿಸಬಹುದಾಗಿದೆ. ಕೆಲವರು ಇದರ ವಿರುದ್ಧವಾಗಿ ಯೋಚಿಸುವವರಾಗಿದ್ದು, ಕೂಡಿದ ಜನಸಮೂಹದಲ್ಲಿ ನಂಬಿಕೆಯನ್ನು ತುಂಬಲು ಯೇಸು ಇದನ್ನು ಮಾಡಿದನು ಎನ್ನುವವರಾಗಿದ್ದಾರೆ. [14]ಇನ್ನು ಮುಂದೆ "ಇವನನ್ನು ಹಿಡಿಯಬೇಡ" ಎಂಬ ಅಪ್ಪಣೆಯು ಆ ತಂದೆಯನ್ನು ಸಮಾಧಾನಪಡಿಸಿರಬೇಕು. ದುರಂತವು ಪುನರಾವರ್ತಿಸಬಾರದು. [15]ಕೊಲಸ್ಸೆ, 216. [16]ಈ ವಚನವನ್ನು ಲೂಕ 7:15 ರೊಂದಿಗೆ ಹೋಲಿಸಿರಿ. [17]James Burton Coffman, *Commentary on Luke* (Abilene, Tex.: ACU Press, 1975), 186. [18]ಮಾರ್ಕ 9:28 "ಯೇಸು ಮನೆಗೆ ಬಂದಾಗ" ಎಂದು ಆರಂಭವಾಗುತ್ತದೆ. ಇದು ಯೇಸು ಮತ್ತು ಆತನ ಶಿಷ್ಯರು ಕಪೆರ್ನೌಮಿಗೆ ಮರಳಿದರು ಎಂದು ಸಮಾರೋಪಿಸುವುದಕ್ಕೆ ಕಾರಣವಾಗಿದೆ (ನೋಡಿ ಮಾರ್ಕ 2:1). ಇದು, ಏನೇ ಆಗಲಿ, ಎಲ್ಲಿಯೇ ಆಗಲಿ ಮನೆಯನ್ನು ಹೊಂದಿದ್ದನು ಎಂಬುದಾಗಿದೆ. [19]KJVಯಲ್ಲಿ "ನಿಮ್ಮ ಅಪನಂಬಿಕೆಯ ಕಾರಣದಿಂದ" ಎಂದಿದೆ. ಆದರೆ ನಿಮ್ಮ ನಂಬಿಕೆಯಲ್ಲಿನ ಅಲ್ಪತೆಯ ಕಾರಣದಿಂದ ಎಂಬುದು ಉತ್ತಮವಾದ ಹಸ್ತಪ್ರತಿಯ ಭಾಗವಾಗಿದೆ. ಯೇಸು ಹಲವು ಬಾರಿ ಶಿಷ್ಯರ "ಅಲ್ಪ ನಂಬಿಕೆಯನ್ನು" ಗದರಿಸಿದ್ದು ಉಂಟು (ನೋಡಿ ಮತ್ತಾಯ 6:30; 8:26; 14:31; 16:8). [20]ಯೇಸು ಆಗ ತಾನೇ ಬೆಟ್ಟದಿಂದ ಇಳಿದು ಬಂದಿದ್ದನು. ಆತನು ಬಹುಶಃ ಆ ಬೆಟ್ಟವನ್ನು ಸೂಚಿಸುತ್ತಾ "ಈ ಬೆಟ್ಟ" ಎಂದು ಹೇಳಿರಬಹುದು.

[21]"ನಿನಗೆ ಅಸಾಧ್ಯವಾದದ್ದು ಯಾವದೂ ಇಲ್ಲ" ಎಂಬ ಪದಗಳಿಗಾಗಿ, ಈ ಪ್ರಸಂಗದಲ್ಲಿ

ಮೊದಲಲ್ಲಿನ ಮಾರ್ಕ 9:23ರಲ್ಲಿನ ಇದಕ್ಕೆ ಸಮಾನವಾದ ವಾಗ್ದಾನದ ಮೇಲಿನ ವ್ಯಾಖ್ಯಾನವನ್ನು ನೋಡಿರಿ. [22]"ಹೇಗೋ ಈ ತರದ ಹೊರಗೆ ಹೋಗದು ಆದರೆ ಪ್ರಾರ್ಥನೆ ಮತ್ತು ಉಪವಾಸದಿಂದ ಮಾತ್ರ" ಎಂದು KJVಯು ವಚನ 21 ಸೇರಿಸುವುದಾಗಿದ್ದು ಇದು ಹಳೆಯ ಹಸ್ತಪತ್ರಿಕೆಗಳನ್ನು ಕಂಡು ಬರುವುದಿಲ್ಲ. ಇದನ್ನು NASBಯು ಬ್ರಾಕೆಟ್‌ಗಳಲ್ಲಿ ಹೊಂದಿದೆ: (ಈ ತರದವು ಪ್ರಾರ್ಥನೆ ಮತ್ತು ಉಪ ವಾಸದ ಹೊರತು ಬಿಟ್ಟು ಹೋಗವು) ಈ ಪ್ರಸಂಗದಲ್ಲಿ ಮುಂದೆ ಮಾರ್ಕ 9:29ನ್ನು ನಾವು ಅಧ್ಯಯನ ಮಾಡುವಾಗ ಈ ಹೇಳಿಕೆಯ ಮೂಲಭಾಗವನ್ನು ನಾವು ಸಂಪೂರ್ಣಮಾಡುವಾ. [23]ಪೌಲನು ಸಹ 1 ಕೊರಿಂಥ 13:2ರಲ್ಲಿ ಇದೇ ರೂಪಕ ಅಲಂಕಾರವನ್ನು ಬಳಸಿದ್ದಾನೆ. [24]ಕೆಲ ಮನೆಗೆಲಸದವರು "ಪಾತ್ರೆಗಳ ಬೆಟ್ಟ" ಅಥವಾ "ಬೆಟ್ಟದಷ್ಟು ಬಟ್ಟೆಯ ಇಸ್ತ್ರಿಮಾಡುವಿಕೆ" ಎಂಬ ಅಲಂಕಾರವನ್ನು ಅರ್ಥೈಸಿಕೊಳ್ಳಬಲ್ಲರು. [25]ವಾಕ್ಯದ ಮೇಲಿನ ಚರ್ಚೆ William Barclay, *The Gospel of Matthew,* rev. ed., vol. 2 (Philadelphia:Westminster Press, 1975), 167ರಲ್ಲಿ ಇದೆ. [26]ನಾನು ಅಲಂಕಾರವನ್ನು ಬಳಸುತ್ತಿದ್ದೇನೆ. ಸಾಸಿವೆಕಾಳು ಅದನ್ನು ಸ್ವಾಭಾವಿಕವಾಗಿ ಮಾಡುವುದಾಗಿದೆ. [27]Hugo McCord, *McCord's New Testament Translation of the Everlasting Gospel* (Henderson, Tenn.: Freed-Hardeman University, 1988), 207. (Emphasis mine.) [28]ಕೆಲ ಲೇಖಕರು "ಈ ತರದ" ಎಂಬ ಪದವು ಕೆಲ ದೆವ್ವಗಳು ಇತರ ದೆವ್ವಗಳಿಂದ ಬಲವಾ ಗಿರುತ್ತವೆ ಎಂದು ಅದರ ಬಗೆಗೆ ಯೋಚಿಸುವವರಾಗಿದ್ದಾರೆ. ಒಂದ ಅಂತೂ ನಿಜ, ಆ ಹುಡುಗನನ್ನು ಹಿಡಿದಿದ್ದ ದೆವ್ವವು ನಾವು ಹಿಂದಿನ ಒಂದು ಪರಿಚ್ಛೇದದಲ್ಲಿ ಅಧ್ಯಯನ ಮಾಡಿದಂತೆ ಶಿಸ್ತಿನಿಂದ ಆತನನ್ನು ಬಿಟ್ಟುಹೋಗಲಿಲ್ಲ. [29]KJVಯು "ಮತ್ತು ಉಪವಾಸ" ಎಂದು ಸೇರಿಸುವುದಾಗಿದೆ, ಆದರೆ ಈ ಪದಗಳು ಅನೇಕ ಹಳೆಯ ಹಸ್ತಪ್ರತಿಗಳಲ್ಲಿ ಸಿಕ್ಕುವುದಿಲ್ಲ. [30]John Franklin Carter, *A Layman's Harmony of the Gospels* (Nashville: Broadman Press, 1961), 176.

[31]ಕಟ್ಟಿಗೆ ಬೆಂಕಿಯ ಬಗೆಗೆ ಯೋಚಿಸಿರಿ. [32]ಇದರ ಕೊನೆಯ ಭಾಗದಲ್ಲಿನ ಕೆಲವು ವಿಷಯಗಳು Rick Atchley, "Down in the Valley," sermon preached at the Southern Hills church of Christ, Abilene, Texas, 11 September 1988 ಆಧಾರಿತವಾಗಿವೆ. [33]ಈ ಪ್ರಶ್ನೆಯು ವಿಸ್ತಾರವಾಗಿ ಚರ್ಚಿತವಾಗಿದೆ, ಆದರೆಇದು ಈ ಪಾಠದ ವ್ಯಾಪ್ತಿಯನ್ನು ಮೀರಿ ದ್ದಾಗಿದೆ. [34]ಇದಕ್ಕೆ ನಾವು ಕೆಲ ವಿಚಾರಗಳನ್ನು ಸೇರಿಸಿದ್ದಾದರೆ, ತನ್ನ ಮರಣ, ಹೂಣುವಿಕೆ ಮತ್ತು ಆತನ ಏರಿ ಹೋಗುವಿಕೆ ಸಂಬಂಧಿಸಿದಂತೆ ಯೇಸು ಪ್ರಕಟಿಸುವ ಮುಂದಿನ ಸಂಗತಿಯ ಕಾಲಾನುಕ್ರಮವಾಗಿ ಏನು ಸಂಭವಿಸುತ್ತದೆ ಎಂಬುದನ್ನು ಪಟ್ಟಿಮಾಡಿರಿ (ಲೂಕ 9:43, 44). ನಮ್ಮ ಮಾರ್ಗದಲ್ಲಿ ಎಷ್ಟೇ ಕಷ್ಟಗಳು ಬಂದರೂ ಕೂಡ, ದೇವರು ನಮ್ಮನ್ನು ಪ್ರೀತಿಸುತ್ತಾನೆ ಎಂದು ಕೂಜೆಯು ನಮಗೆ ವಿಶ್ವಾಸವನ್ನು ಕೊಡುತ್ತದೆ. ಪುನರುತ್ಥಾನವು ಕೆಟ್ಟನವು ಸೋಲಲೇಬೇಕು ಎಂಬ ವಿಶ್ವಾಸವನ್ನು ಕೊಡುವುದಾಗಿದೆ! [35]John H. Westerhoff III, *Will Our Children Have Faith?* (New York: HarperCollins Publishers, 1976), 89–99. ನಾನು ಅವರ ಪದಗಳನ್ನು ತೆಗದು ಕೊಂಡೆನೇ ಹೊರತು ಅವರ ಭಾವಗಳನಲ್ಲ. ಸಾರಾಂಶವು ನನ್ನದಾಗಿವೆ.[36] ಆತನು ಇದನ್ನು "ಸ್ವೀಕರಿಸಿದ" ನಂಬಿಕೆ ಎಂದು ಕರೆದನು. ಇದಕ್ಕೆ ಪ್ರತಿಯಾಗಿ ನಾನು ಹೆಚ್ಚು ಚಿರಪರಿಚಿತವಾದ ಪದವಾದ "ಸೇರಿಸಲ್ಪಟ್ಟ" ಎಂಬುದನ್ನು ಕೊಡುವವನಾಗಿದ್ದೇನೆ. [37]ಲೌಕಿಕ ಶಾಲೆಯಲ್ಲಿ ಒಬ್ಬ ಅವಿಶ್ವಾಸಿ ಶಿಕ್ಷಕ ಅಥವಾ ವೈಯಕ್ತಿಕ ದುರಂತ (ಉದಾರಣೆಗೆ: ಮಗುವಿನ ಮರಣ) ಇದನ್ನು ನಿಮ್ಮ ಸಮಾಜಕ್ಕೆ ತಕ್ಕಂತೆ ಹೊಂದಿಸಿ ಹೇಳಿರಿ. [38]The New Century Version "ಕ್ರಿಸ್ತನ ಬಗೆಗೆ ಮಾತನಾಡುವುದಾಗಿದೆ" (ಒತ್ತಿ ಹೇಳಿದ್ದು ನನ್ನದು). [39]ಆ ತದೆಯ ನಂಬಿಕೆಯು ಶಿಷ್ಯರ ಮತ್ತು ಶಾಸ್ತ್ರಿಗಳ ನಂಬಿಕೆಯಿಲ್ಲದಿರುವಿಕೆಯಿಂದ ಅಲುಗಾಡಲ್ಪಟ್ಟಿತು. [40]ಶಿಷ್ಯರು ಪ್ರತ್ಯಕ್ಷವಾಗಿ ದೇವರ ಮೇಲೆ ಆತುಕೊಳ್ಳುವುದರ ಬದಲು ತಮ್ಮ ಮೇಲೆ ಆತುಕೊಂಡಿದ್ದರು.

[41]ನಮ್ಮ ವೇಭಾಗವು ನಂಬಿಕೆ ಮತ್ತು ಪ್ರಾರ್ಥನೆಯ ಮಧ್ಯದ ಸಂಬಂಧವನ್ನು ಸೂಚಿಸುವುದಾಗಿದೆ (ಮತ್ತಾಯ 17:20; ಮಾರ್ಕ 9:29). [42]ಸತ್ಯವೇದಿಯ ಧ್ಯಾನವು ಇಂದು ಸಾಮಾನ್ಯವಾಗಿ "ಧ್ಯಾನವೆಂದು" ಕರೆಯುವುದಕ್ಕೆ ಸಮಾನ ವಾಗಿಲ್ಲ ಎಂಬುದನ್ನು ಗಮನಿಸಿರಿ (ಸದಾಕಾಲ ಕ್ಷುಲ್ಲಕವಾದ ಪಠ್ಯಕ್ರಮವನ್ನು ಬಾಯಿ ಪಾಠಮಾಡಿಸುವುದಕ್ಕೆ ಕೇಂದ್ರಿಕರಿಸುವಂಥ). [43]ಉದಾಹರಣೆಗೆ, ಒಬ್ಬನ ನಂಬಿಕೆಯನ್ನು ಅಳಿಕೆಮಾಡುವದು ಅದನ್ನು ನಿಜವಾಗಿಸುವುದಕ್ಕೆ ಸಹಾಯಿಸುವುದಾಗಿದೆ. ನಿಮ್ಮ ಮನದಲ್ಲಿ ಬರುವ ಸೂಚನೆಗಳನ್ನು ಇದಕ್ಕೆ ಸೇರಿಸಿರಿ.